
ನವಸಾಕ್ಷರ ಪುಸ್ತಕ ಮಾಲೆ ೬೩

ಕರ್ನಾಟಕದ ಚರಿತ್ರೆ

ಡಾ. ದೇವರ ಕೊಂಡಾರೆಡ್ಡಿ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶ್ರೀಯುತರಾದ
ಹಾ. ಮಾ. ನಾಯಕ
ಎಚ್. ನರಸಿಂಹಯ್ಯ
ಜಿ. ನಾರಾಯಣ
ಎಲ್. ಎಸ್. ಶೇಷಗಿರಿರಾವ್
ಶಾಂತರಸ
ಕೆ. ವಿ. ಸುಬ್ಬಣ್ಣ
ಗೊ. ರು. ಚನ್ನಬಸಪ್ಪ
ಪಿ. ಎಸ್. ಶಂಕರ್
ಶಿವಶಂಕರ ಹಿರೇಮಠ
ಆರ್. ಎಸ್. ರಾಜಾರಾಮ್
ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ
ಎಸ್. ಜಿ. ನಾಗಲೋಟಿಮಠ
ಕೆ. ವಿ. ನಾರಾಯಣ
ಪುರುಷೋತ್ತಮ ಬಿಳಿಮಲೆ
ಕರೀಗೌಡ ಬೀಚನಹಳ್ಳಿ
ಅಮೃತ ಸೋಮೇಶ್ವರ
ಸಿ. ಆರ್. ಚಂದ್ರಶೇಖರ್
ಬಿ. ಎ. ಶ್ರೀಧರ
ಲಿಂಗದೇವರು ಹಳೆಮನೆ
ಭ. ಮಲ್ಲಿಕಾರ್ಜುನ
ಮಹಾಬಲೇಶ್ವರರಾವ್
ಭಕ್ತಪ್ರಿಯ
ಎಂ. ಪಿ. ಪರಮಶೇಖರಯ್ಯ
ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ

ನವಸಾಕ್ಷರ ಪುಸ್ತಕ ಮಾಲೆ - ೬೩

ಕರ್ನಾಟಕದ ಚರಿತ್ರೆ

ಡಾ. ದೇವರ ಕೊಂಡಾರೆಡ್ಡಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೧೧

KARNATAKADA CHARITRE : By Dr. Devara Kondareddy. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
8/1, ಮಾರೇನಹಳ್ಳಿ, 1ನೇ ಕ್ರಾಸ್, 23ನೇ ಮೇನ್,
ಜೆ. ಪಿ. ನಗರ, ಬೆಂಗಳೂರು-560 078.
ಫೋನ್: 642102

ಕರ್ನಾಟಕದ ಚರಿತ್ರೆ

ಒಂದು ನಾಡು ಹಾಗೂ ಅಲ್ಲಿನ ಜನಜೀವನ ನಡೆದು ಬಂದ ಕತೆಯನ್ನು ಆ ನಾಡಿನ ಚರಿತ್ರೆ ಅಥವಾ ಇತಿಹಾಸ ಎನ್ನುತ್ತಾರೆ. ಈ ಕತೆಯನ್ನು ತಿಳಿಯಲು ನಮಗೆ ನೆರವಾಗುವವರು ಇತಿಹಾಸಕಾರರು. ಇವರು ಒಂದು ಸ್ಥಳದಲ್ಲಿ ಕಂಡು ಬರುವ ಹಳೆಯ ಕಟ್ಟಡಗಳು, ಕಲ್ಲಿನ ಮೇಲಿನ ಬರವಣಿಗೆಗಳು, ಸಾಹಿತ್ಯ ಗ್ರಂಥಗಳು, ಜನಪದ ಸಾಹಿತ್ಯಗಳು, ವಿವಿಧ ಸಂಪ್ರದಾಯಗಳು ಹಾಗೂ ಆಚರಣೆಗಳು - ಇವೇ ಮೊದಲಾದವನ್ನು ವಿಶೇಷವಾಗಿ ಅಭ್ಯಾಸ ಮಾಡುತ್ತಾರೆ. ಇದರ ಮೇಲೆ ನಡೆದಿರಬಹುದಾದ ಕತೆಯನ್ನು ಊಹಿಸುತ್ತಾರೆ.

ಚರಿತ್ರೆ ಎಂದರೆ ನಾಡಿನ ಕತೆ. ಆದರೆ ಕಟ್ಟುಕತೆಯಲ್ಲ. ದೊರೆಯುವ ಸಂಗತಿಗಳ ಆಧಾರದ ಮೇಲೆ ಹೀಗೆ ನಡೆದಿರಬಹುದು ಎಂದು ಊಹಿಸಿದ ಕತೆ.

ಸಾಮಾನ್ಯವಾಗಿ ಯಾವುದಾದರೊಂದು ರೀತಿಯಲ್ಲಿ ದೊಡ್ಡದಾಗಿ ಬದುಕಿದವರ ಕತೆ ಒಂದಲ್ಲ ಒಂದು ರೀತಿಯಲ್ಲಿ ಜನರ ನಡುವೆ ಉಳಿದು ಬರುತ್ತದೆ. ನಾಡನ್ನು ಆಳಿದವರ ಕತೆ, ನಾಡಿನ ಕತೆಯನ್ನೂ, ನಾಡಿನ ಜನರ ಕತೆಯನ್ನೂ ಹೇಳುತ್ತದೆ. ಹಾಗಾಗಿ, ಒಂದು ನಾಡಿನ ಚರಿತ್ರೆಯಲ್ಲಿ ಅದನ್ನು ಆಳಿದ ರಾಜಮನೆತನಗಳ ಕತೆ ಮುಖ್ಯವಾಗುತ್ತದೆ.

ಕರ್ನಾಟಕದ ಚರಿತ್ರೆಯಲ್ಲಿ ಆಗಿ ಹೋದ ರಾಜಮನೆತನಗಳ ಕತೆ ಬಲು ಸ್ವಾರಸ್ಯಕರವಾದುದು. ಕಾಲಾನುಕ್ರಮದಲ್ಲಿ ಈ ರಾಜಮನೆತನಗಳ ಕತೆಯನ್ನು ಜೋಡಿಸಿಕೊಂಡು ನೋಡಿದಾಗ ಕರ್ನಾಟಕದ ಚರಿತ್ರೆಯ ಅರಿವನ್ನು ಪಡೆಯಲು ಸಾಧ್ಯ.

ಮೌರ್ಯರು

ಕರ್ನಾಟಕವನ್ನು ಮೊದಲು ಗೆದ್ದವನು ಅಶೋಕ. ಇವನು ಮೌರ್ಯ ವಂಶದವನು. ಇವನ ರಾಜಧಾನಿ ಪಾಟಲೀಪುತ್ರ. ಈ ಅಶೋಕನು ಕಳಿಂಗದ ಮೇಲೆ ಯುದ್ಧ ಮಾಡಿದ. ಅಲ್ಲಿನ ಸಾವು ನೋವುಗಳನ್ನು ಕಂಡು ಬೇಸರಗೊಂಡ. ಅವನು ಮುಂದೆ ಯುದ್ಧ ಮಾಡುವುದಿಲ್ಲವೆಂದು ನಿರ್ಧರಿಸಿದ. ಬೌದ್ಧ ಧರ್ಮವನ್ನು ಸೇರಿದ. ಕರ್ನಾಟಕದಲ್ಲಿ ಇವನು ಕಲ್ಲಿನ ಮೇಲೆ ಅನೇಕ ಶಾಸನಗಳನ್ನು ಬರೆಸಿದ. ಚಿತ್ರದುರ್ಗ ಜಿಲ್ಲೆ, ರಾಯಚೂರು ಜಿಲ್ಲೆ, ಬಳ್ಳಾರಿ ಜಿಲ್ಲೆ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಇವನ ಶಾಸನಗಳು ಸಿಕ್ಕಿವೆ. ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ ಬೆಟ್ಟದಲ್ಲಿ 'ಇಸಿಲ'ವೆಂಬ ಗ್ರಾಮವಿತ್ತು. ಅದು ಇವನ ಕಾಲದಲ್ಲಿ ಪ್ರಸಿದ್ಧ ನಗರವಾಗಿತ್ತು.

ಶಾತವಾಹನರು

ಅಶೋಕನ ನಂತರ ಒಂದೆರಡು ನೂರು ವರ್ಷಗಳ ಇತಿಹಾಸ ನಮಗೆ ತಿಳಿಯುವುದಿಲ್ಲ. ಇಂದಿಗೆ ಎರಡು ಸಾವಿರ ವರ್ಷಗಳ ಹಿಂದೆ ಶಾತವಾಹನರೆಂಬ ಅರಸರು ಆಳುತ್ತಿದ್ದರು. ಇವರು ಸುಮಾರು ಮುನ್ನೂರ ಐವತ್ತು ವರ್ಷಗಳ ಕಾಲ ಆಳಿದರು. ಹೊರದೇಶದ ಶಕರ ದಾಳಿಯನ್ನು ಇವರು ತಡೆದರು. ಉತ್ತರ ಕನ್ನಡ ಜಿಲ್ಲೆಯ ಬನವಾಸಿ, ಶಿವಮೊಗ್ಗ ಜಿಲ್ಲೆಯ ಮಳವಳ್ಳಿ, ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಇವರ ಕಾಲದ ಮುಖ್ಯ ಸ್ಥಳಗಳು. ಬನವಾಸಿಯಲ್ಲಿ 'ಚುಟು' ವಂಶದ ಅರಸರಿದ್ದರು. ಅವರು ಶಾತವಾಹನರ ಮಾಂಡಲೀಕರಾಗಿದ್ದರು. ಬನವಾಸಿಯಲ್ಲಿ ಇವರ ಕಾಲದ ನಾಗಪ್ರತಿಮೆ ದೊರೆತಿದೆ.

ಕದಂಬರು


ಶಾತವಾಹನರ ನಂತರ ಕರ್ನಾಟಕದ ಆಳ್ವಿಕೆ ನಡೆಸಿದವರು ಪಲ್ಲವರು. ಈ ಪಲ್ಲವರ ಆಡಳಿತವನ್ನು ವಿರೋಧಿಸಿ ಮಯೂರಶರ್ಮನು ರಾಜ್ಯ ಕಟ್ಟಿದನು. ಇವನ ವಂಶವನ್ನು

ಕದಂಬ ವಂಶವೆನ್ನುತ್ತಾರೆ. ಮಯೂರ ಶರ್ಮನು ಈ ವಂಶದ ಮೊದಲ ರಾಜ. ಸುಮಾರು ಒಂದು ಸಾವಿರದ ಆರುನೂರು ವರ್ಷಗಳ ಹಿಂಗೆ ಇವರ ರಾಜ್ಯಭಾರ ಆರಂಭವಾಯಿತು. ಇವನ ರಾಜಧಾನಿ ಇಂದಿನ ಬನವಾಸಿ. ಇದನ್ನು ವೈಜಯಂತೀಪುರವೆಂದೂ ಕರೆಯುತ್ತಾರೆ. ಮಯೂರನು ಚಂದ್ರವಳ್ಳಿಯಲ್ಲಿ ಒಂದು ಕೆರೆಯನ್ನು ಕಟ್ಟಿಸಿದ. ಈ ವಂಶದ ಇನ್ನೊಬ್ಬ ಪ್ರಮುಖ ಅರಸನೆಂದರೆ ಕದಂಬ ಕಾಕುಸ್ಥವರ್ಮ. ಈತ ಉತ್ತರ ದೇಶದ ಅರಸರೊಂದಿಗೆ ಸಂಬಂಧಗಳನ್ನು ಬೆಳೆಸಿದ್ದವನು. ಇವನು ಮಹಾ ಪರಾಕ್ರಮಿ. ಅನೇಕ ಅರಸರನ್ನು ಸೋಲಿಸಿದ. ತಾಳಗುಂದದಲ್ಲಿ ಒಂದು ಕೆರೆಯನ್ನು ಕಟ್ಟಿಸಿದ. ಕಾಕುಸ್ಥವರ್ಮನ ಮೊಮ್ಮಗನು ಮೃಗೇಶವರ್ಮ. ಇವನು ಶೂರ. ಕದಂಬರು ತಾಳಗುಂದ, ಹಲಸಿ, ಬನವಾಸಿ ಮುಂತಾದ ಕಡೆ ದೇವಾಲಯಗಳನ್ನು ಮತ್ತು ಜೈನ ಬಸದಿಗಳನ್ನ ಕಟ್ಟಿಸಿದ್ದಾರೆ. ಗುಡ್ನಾಪುರ ಮತ್ತು ತಾಳಗುಂದದಲ್ಲಿ ಕೆರೆಯನ್ನು ಕಟ್ಟಿಸಿದ್ದಾರೆ. ಇವರ ಮುದ್ರೆಯ ಗುರುತು ಸಿಂಹ.

ಗಂಗರು

ಗಂಗರು ಮೊದಲು ಪಲ್ಲವರ ಸಾಮಂತರಾಗಿದ್ದವರು. ಮುಂದೆ ಸ್ವತಂತ್ರ ರಾಜರೆನಿಸಿದರು. ಈ ವಂಶದ ಮೂಲ ಪುರುಷ ಕೊಂಗುಣಿವರ್ಮ. ಇವರ ಮೊದಲ ರಾಜಧಾನಿ ಕೋಲಾರ. ಇವರು ಕದಂಬರಂತೆ ವೈದಿಕ ಮನೆತನದವರು. ಮೂರನೆಯ ಮಾಧವನು ರಾಜಧಾನಿಯನ್ನು ತಲಕಾಡಿಗೆ ಬದಲಾಯಿಸಿದ. ಇವನ ಮಗ ಅವಿನೀತ. ಈತನು ಪುನ್ನಾಡ ರಾಜಕುಮಾರಿಯನ್ನು ಮದುವೆಯಾಗಿದ್ದ. ಇವನ ಮಗ ದುರ್ವಿನೀತ. ಈತ ಶೂರನಾದ ದೊರೆ. ಆಲತ್ತೂರು, ಅಂದರಿ ಮೊದಲಾದ ಯುದ್ಧಗಳಲ್ಲಿ ಭಾಗವಹಿಸಿದ್ದನು. ಈತನು ಕವಿಯಾಗಿದ್ದವನು. ಅನೇಕ ಗ್ರಂಥಗಳನ್ನು ಬರೆದಂತೆ ತಿಳಿಯುತ್ತದೆ.

ದುರ್ವಿನೀತನ ನಂತರ ಬಂದ ಅರಸರಲ್ಲಿ ಮುಖ್ಯನಾದವನು ಶ್ರೀಪುರುಷ. ಈತ ಚಾಲುಕ್ಯ ರಾಜಕುಮಾರಿಯನ್ನು ಮದುವೆಯಾಗಿದ್ದ. ಅನೇಕ ದೇವಾಲಯ, ಬಸದಿಗಳನ್ನು ಕಟ್ಟಿಸಿದ. ಚಾಲುಕ್ಯರ ಕೊನೆಯ ರಾಜ ಕೀರ್ತಿವರ್ಮ. ಇವನನ್ನು ರಾಷ್ಟ್ರಕೂಟರು ಸೋಲಿಸಿದರು. ಆನಂತರ ರಾಷ್ಟ್ರಕೂಟರೇ ರಾಜರಾದರು. ಶ್ರೀಪುರುಷ ಚಾಲುಕ್ಯರ ಸಂಬಂಧಿ. ಆದ್ದರಿಂದ ಅವನು ರಾಷ್ಟ್ರಕೂಟರ ಮೇಲೆ ಯುದ್ಧ ಮಾಡಿದ. ಪಲ್ಲವರ ಮೇಲೆಯೂ ಯುದ್ಧ ಮಾಡಿದ. ಈತನ ಕಾಲದಲ್ಲಿ ತಲಕಾಡಲ್ಲದೆ ಮಣ್ಣೆಯೂ ಇವನ ರಾಜಧಾನಿಯಾಗಿತ್ತು. ಇವನ ನಂತರ




ಗಂಗರಕಾಲದ ಗೊಮ್ಮಟ ಶಿಲ್ಪ

ಒಂದನೆಯ ರಾಚಮಲ್ಲನು ರಾಜನಾದನು. ಇವನ ತಮ್ಮ ಒಂದನೆಯ ಬೂತುಗ. ಇವನಿಗೆ ರಾಷ್ಟ್ರಕೂಟ ಅಮೋಘವರ್ಷ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದ. ಒಂದನೇ ರಾಚಮಲ್ಲನು ತಮಿಳುನಾಡಿನ ವಳ್ಳಿಮಲೆಯಲ್ಲಿ ಜೈನ ಬಿಂಬಗಳನ್ನು ಮಾಡಿಸಿದ. ಇಮ್ಮಡಿ ಬೂತುಗನ ಕಾಲದಲ್ಲಿ ರಾಜ್ಯ ಬಹು ವಿಸ್ತಾರವಾಯಿತು. ಇವನು ರಾಷ್ಟ್ರಕೂಟ ಮೂರನೇ ಕೃಷ್ಣನ ತಂಗಿಯನ್ನು ಮದುವೆಯಾಗಿದ್ದ. ಕೃಷ್ಣನ ಪರವಾಗಿ ಚೋಳರ ಮೇಲೆ ದಂಡೆತ್ತಿ ಹೋಗಿದ್ದ. ಆ ಯುದ್ಧದಲ್ಲಿ ರಾಜಾಧಿತ್ಯ ಚೋಳನನ್ನು ಕೊಂದ. ಮೊದಲು ಗಂಗರು ವೈದಿಕ ಮನೆತನದ ಅರಸರಾಗಿದ್ದರು. ಕೊನೆಗಾಲದಲ್ಲಿ ಇವರು ಜೈನ ಧರ್ಮವನ್ನು ಒಪ್ಪಿಕೊಂಡರು.

ಈಗಿನ ವರ್ತೂರು, ಕೋಲಾರ, ಅಗರ, ಹೆಬ್ಬಟ ಮುಂತಾದ ಕಡೆಯ ಕೆರೆಗಳನ್ನು ಇವರೇ ಕಟ್ಟಿಸಿದ್ದು. ನೂರಾರು ದೇವಾಲಯಗಳನ್ನೂ ಬಸದಿಗಳನ್ನೂ ನಿರ್ಮಾಣ ಮಾಡಿದರು. ಚಾವುಂಡರಾಯನು ಶ್ರವಣಬೆಳಗೊಳದಲ್ಲಿ ಬಹು ಸುಂದರವಾದ ಗೊಮ್ಮಟನ ಜೊತೆಗೆ, ಚಾವುಂಡರಾಯ ಬಸದಿ ಎಂಬ ಸುಂದರ ಬಸದಿಯನ್ನು ಕಟ್ಟಿಸಿದ. ಒಂದು ಸಾವಿರ ವರ್ಷಗಳ ಹಿಂದೆ ಈ ಶಿಲ್ಪವನ್ನು ಕೆತ್ತಿಸಿದ. ಈ ವಂಶ ಚೋಳರ ಧಾಳಿಯಿಂದ ಕೊನೆಯಾಯಿತು.

ಬಾದಾಮಿಯ ಚಾಲುಕ್ಯರು

ಈಗ್ಗೆ ಸುಮಾರು ಒಂದು ಸಾವಿರದ ನಾನ್ನೂರು ಐವತ್ತು ವರ್ಷಗಳ ಹಿಂದೆ ಚಾಲುಕ್ಯ ರಾಜ್ಯ ಸ್ಥಾಪನೆಯಾಯಿತು. ಈ ವಂಶದ ಮೂಲ ಪುರುಷ ರಣರಾಗ ಎಂಬುವವನು. ಬಾದಾಮಿ ಇವರ ರಾಜಧಾನಿ. ಆದ್ದರಿಂದ ಇವರನ್ನು ಬಾದಾಮಿ ಚಾಲುಕ್ಯರೆಂದು ಕರೆಯುತ್ತಾರೆ.



ಬಾದಾಮಿ ಚಾಲುಕ್ಯ ಶಿಲ್ಪ

ಮುಂದೆ ಒಂದನೆಯ ಪುಲಕೇಶಿಯು ಬಾದಾಮಿಯಲ್ಲಿ ಕೋಟೆಯನ್ನು ಕಟ್ಟಿಸಿದ. ಇವರಲ್ಲಿ ಕೀರ್ತಿವರ್ಮನ ತಮ್ಮನಾದ ಮಂಗಲೇಶ, ಇಮ್ಮಡಿ ಪುಲಕೇಶಿ ಮತ್ತು ಇಮ್ಮಡಿ ವಿಕ್ರಮಾದಿತ್ಯ ಮುಖ್ಯರಾದವರು.

ಮಂಗಲೀಶನು ಈ ರಾಜ್ಯವನ್ನು ವಿಸ್ತರಿಸಿದ. ಅನೇಕ ಸಣ್ಣ ಪುಟ್ಟ ರಾಜರನ್ನು ತನ್ನ ಸಾಮಂತರನ್ನಾಗಿ ಮಾಡಿದ. ಬಾದಾಮಿಯಲ್ಲಿ ಗುಹಾ ದೇವಾಲಯಗಳನ್ನು ಮಾಡಿಸಿದ. ರಾಜ್ಯಕ್ಕೆ ಗಟ್ಟಿಯಾದ ತಳಪಾಯ ಹಾಕಿದ. ಎರಡನೆಯ ಪುಲಕೇಶಿ ಮಂಗಲೀಶನ ಅಣ್ಣನ ಮಗ. ಇವನು ತನ್ನ ಚಿಕ್ಕಪ್ಪನನ್ನು ಸೋಲಿಸಿ ರಾಜನಾದ. ಈತನು ಉತ್ತರ ದೇಶದ ಹರ್ಷನನ್ನು ಸೋಲಿಸಿದ್ದಲ್ಲದೆ ಪಲ್ಲವ ವಂಶದ ದೊರೆ ಕಂಚಿಯ ಮಹೇಂದ್ರನನ್ನು ಸೋಲಿಸಿದ. ಮೂರು ಮಹಾ ದೇಶಗಳ ರಾಜನೆಂದು ಹೇಳಿಕೊಂಡಿದ್ದಾನೆ. ತನ್ನ ತಮ್ಮ ಕುಬ್ಜ ವಿಷ್ಣುವರ್ಧನನನ್ನು ಆಂಧ್ರದ ವೆಂಗಿಯಲ್ಲಿ ರಾಜನಾಗಿ ನೇಮಿಸಿದ. ಇವನಿಂದ ವೆಂಗಿ ಚಾಲುಕ್ಯ ವಂಶ ಪ್ರಾರಂಭವಾಯಿತು. ನರ್ಮದೆಯಿಂದ ಕಾವೇರಿಯವರೆಗೆ ಪುಲಕೇಶಿಯ ರಾಜ್ಯ ಹಬ್ಬಿತು. ಪುಲಕೇಶಿಯನ್ನು ಪಲ್ಲವ ಮಹೇಂದ್ರವರ್ಮನ ಮಗ ನರಸಿಂಹವರ್ಮನು ಸೋಲಿಸಿದ. ಪುಲಕೇಶಿಯ ಮಗ ಒಂದನೆಯ ವಿಕ್ರಮಾದಿತ್ಯ. ಈತನು ತೊಂದರೆಗೆ ಒಳಗಾಗಿದ್ದ ರಾಜ್ಯವನ್ನು ಒಗ್ಗೂಡಿಸಿದ. ಇದೇ ವಂಶದಲ್ಲಿ ಇಮ್ಮಡಿ ವಿಕ್ರಮಾದಿತ್ಯನೆಂಬುವವನು ಪಟ್ಟಕ್ಕೆ ಬಂದ. ಈತ ಪಲ್ಲವರನ್ನು ಸೋಲಿಸಿ ಕಂಚಿಯನ್ನು ಮೂರು ಬಾರಿ ಗೆದ್ದ. ಈತನ ನಂತರ ಬಂದ ಅರಸರು ಸತ್ವಹೀನರಾಗಿದ್ದರು. ಇವರನ್ನು ಮೂಲೆಗೆ ತಳ್ಳಿ ರಾಷ್ಟ್ರಕೂಟರು ಅಧಿಕಾರಕ್ಕೆ ಬಂದರು.

ಚಾಲುಕ್ಯರ ಕೊಡುಗೆ

ಈ ಚಾಲುಕ್ಯರ ಕಾಲದಲ್ಲಿ ಕರ್ನಾಟಕದ ಗಡಿಗಳು ವಿಸ್ತಾರವಾದವು. ಇವರ ರಾಜ್ಯವು ಉತ್ತರದಲ್ಲಿ ಗುಜರಾತಿನವರೆಗೆ, ದಕ್ಷಿಣದಲ್ಲಿ ನೀಲಗಿರಿಯವರೆಗೆ ಹಬ್ಬಿತು. ದೇವಾಲಯದ ಕಟ್ಟಡಗಳ ರಚನೆ ಇವರ ಕಾಲದಲ್ಲಿ ಹೆಚ್ಚಾಗಿ ನಡೆಯಿತು. ಉತ್ತರ ಹಾಗೂ ದಕ್ಷಿಣ ರೀತಿಯ ಕಟ್ಟಡಗಳ ರಚನೆಯ ಪ್ರಯೋಗಗಳು ನಡೆದವು. ಒಂದೇ ಕಲ್ಲಿನಲ್ಲಿ ಕೊರೆದ ಗುಹಾ ದೇವಾಲಯಗಳು ಕರ್ನಾಟಕದಲ್ಲಿ ಇವರ ಕಾಲದಿಂದ ಕಾಣಬರುತ್ತವೆ. ಇವರ ಕಾಲದಲ್ಲಿ ಐಹೊಳೆಯು, ದೇವಾಲಯರಚನೆಗಳ ಪ್ರಯೋಗ ಕೇಂದ್ರವಾಯಿತು. ಬಾದಾಮಿ, ಮಹಾಕೂಟ, ಪಟ್ಟದಕಲ್ಲು, ಐಹೊಳೆ, ಆಲಂಪುರ ಮೊದಲಾದ ಸ್ಥಳಗಳು ವಾಸ್ತು ಹಾಗೂ ಶಿಲ್ಪಕಲೆಯ ಕೇಂದ್ರಗಳಾದವು. ಇವರು ತಮ್ಮ ಮುದ್ರೆಗಳಲ್ಲಿ ಹಂದಿಯ ಚಿತ್ರವನ್ನು ಬಳಸಿದರು.

ರಾಷ್ಟ್ರಕೂಟರು

ಸುಮಾರು ಒಂದು ಸಾವಿರದ ಇನ್ನೂರ ಐವತ್ತು ವರ್ಷಗಳ ಹಿಂದೆ ರಾಷ್ಟ್ರಕೂಟ ವಂಶದ ದಂತಿದುರ್ಗನು ಚಾಲುಕ್ಯ ವಂಶದ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿದ.

ಇದರಿಂದ ಚಾಲುಕ್ಯ ವಂಶ ಕೊನೆಗೊಂಡಿತು. ರಾಷ್ಟ್ರಕೂಟ ವಂಶ ಆರಂಭವಾಯಿತು. ಇವರ ರಾಜಧಾನಿ ಮಾನ್ಯಖೇಟ. ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ಅನೇಕ ಯುದ್ಧಗಳಲ್ಲಿ ಭಾಗವಹಿಸಿ ಜಯವನ್ನು ಸಂಪಾದಿಸಿದ. ಅರಬರ ಧಾಳಿಯನ್ನು ತಡೆದ. ಇವನ ನಂತರ ಇವನ ಚಿಕ್ಕಪ್ಪ ಒಂದನೆಯ ಕೃಷ್ಣನು ಪಟ್ಟಕ್ಕೆ ಬಂದ. ತಮ್ಮ ಒಡೆತನವನ್ನು ಒಪ್ಪಿಕೊಳ್ಳದ ಸಾಮಂತರ ಮೇಲೆ ಯುದ್ಧ ಮಾಡಿದ. ಗಂಗರ ಮೇಲೆ ನಡೆದ ಯುದ್ಧ ಮುಖ್ಯವಾದದ್ದು. ಗಂಗರು ಚಾಲುಕ್ಯರ ಸಂಬಂಧಿಗಳು. ಹೀಗಾಗಿ ರಾಷ್ಟ್ರಕೂಟರನ್ನು ವಿರೋಧಿಸಿದರು.

ಈ ಯುದ್ಧ ಒಂದನೆಯ ಅಮೋಘವರ್ಷನ ಕಾಲದವರೆಗೆ ನಡೆಯಿತು. ಈತ ತನ್ನ ಮಗಳನ್ನು ಗಂಗ ರಾಜಕುಮಾರ ಬೂತುಗನಿಗೆ ಕೊಡುವುದರೊಂದಿಗೆ ಯುದ್ಧ ಮುಗಿತು. ಇವರ ಸಂಬಂಧ ಇಲ್ಲಿಂದ ಚಿಗುರಿತು. ಅಮೋಘವರ್ಷನ ಕಾಲಕ್ಕೆ ರಾಷ್ಟ್ರಕೂಟ ಸಾಮ್ರಾಜ್ಯವು ಉತ್ತರದಲ್ಲಿ ಮಾಳವ ದೇಶದಿಂದ ದಕ್ಷಿಣದಲ್ಲಿ ಕಾವೇರಿಯವರೆಗೆ ಹಬ್ಬಿತು. ಮೂರನೇ ಕೃಷ್ಣನ ಕಾಲದಲ್ಲಿ ದಕ್ಷಿಣದಲ್ಲಿ ಚೋಳನಾಡಿನಿಂದ ಮಾಳವದವರೆಗೆ ಹಬ್ಬಿತು. ಮಧ್ಯಪ್ರದೇಶದಲ್ಲಿ ಇವರ ಹೊಗಳಿಕೆಯ ಕನ್ನಡ ಶಾಸನ ದೊರೆತಿದೆ. ಕೊನೆಯ ಅರಸ ಇಂದ್ರನು 'ಸಲ್ಲೇಖನ' ಎಂಬ ವ್ರತ ಹಿಡಿದು ಮರಣ ಹೊಂದಿದ. ಶಾಸನಗಳಲ್ಲಿ ರಾಷ್ಟ್ರಕೂಟರನ್ನೂ ವಲ್ಲಭರು, ಬಲ್ಲಹರು ಎಂದು ಕರೆಯಲಾಗಿದೆ.

ರಾಷ್ಟ್ರಕೂಟರು ಬಹುವಿಸ್ತಾರವಾದ ರಾಜ್ಯಕ್ಕೆ ರಾಜರಾಗಿದ್ದರು. ಹಾಗೆಯೇ ಕಲಾಪ್ರೇಮಿಗಳಾಗಿದ್ದರು. ಎಲ್ಲೋರದ ಏಕಶಿಲಾ ದೇವಾಲಯ ಇವರ ಕಲಾಪ್ರೇಮಕ್ಕೆ ಸಾಕ್ಷಿ. ಶಿರವಾಳದ ಅನೇಕ ದೇವಾಲಯಗಳು ಇವರ ಕಾಲದವು. ವೈದಿಕ ಧರ್ಮಕ್ಕಲ್ಲದೆ ಜೈನ ಧರ್ಮಕ್ಕೂ ಪ್ರೋತ್ಸಾಹ ನೀಡಿದರು. ಜೈನ ಧರ್ಮದ ಧವಳ, ಜಯಧವಳ ಎಂಬ ಟೀಕಾ ಗ್ರಂಥಗಳು ಇವರ ಕಾಲದಲ್ಲಿ ರಚಿತವಾದವು. ಅಮೋಘವರ್ಷ ನೃಪತುಂಗನ ಕಾಲದಲ್ಲಿ ಅವನ ಆಸ್ಥಾನ ಕವಿ ಶ್ರೀ ವಿಜಯ 'ಕವಿರಾಜಮಾರ್ಗ' ಎಂಬ ಕನ್ನಡ ಗ್ರಂಥವನ್ನು ಬರೆದಿದ್ದಾನೆ. ಇದು ಕನ್ನಡದ ಮೊದಲ ಕೃತಿ. ಇವರು ರಾಜಚಿಹ್ನೆಯಾಗಿ ಗರುಡ ಮುದ್ರೆಯನ್ನು ಬಳಸಿದರು.

ನೊಳಂಬರು

ಕರ್ನಾಟಕವನ್ನಾಳಿದ ಮಾಂಡಲೀಕ ಮನೆತನಗಳಲ್ಲಿ ನೊಳಂಬರೂ ಇದ್ದಾರೆ. ಇವರು ಕರ್ನಾಟಕ, ಆಂಧ್ರ ಮತ್ತು ತಮಿಳುನಾಡಿಗೆ ಸೇರಿದ ಭಾಗಗಳನ್ನು ಆಳುತ್ತಿದ್ದರು. ತಮ್ಮನ್ನು

ಕಂಚಿಯ ಪಲ್ಲವರ ವಂಶದವರೆಂದು ಹೇಳಿಕೊಂಡಿದ್ದಾರೆ. ಅನಂತಪುರ ಜಿಲ್ಲೆಯ ಮಡಕಶರಾ ತಾಲ್ಲೂಕಿನ ಇಂದಿನ ಹೇಮಾವತಿ ಇವರ ರಾಜಧಾನಿ. ಇದರ ಹಳೆಯ ಹೆಸರು ಹೆಂಜೇರು. ಈ ವಂಶದಲ್ಲಿ ಒಂದನೆಯ ಮಹೇಂದ್ರ ಬಹು ಪ್ರಬಲನಾದ ರಾಜ. ನೊಳಂಬ ರಾಜ್ಯವನ್ನು ವಿಸ್ತಾರ ಮಾಡಿದ್ದಲ್ಲದೆ ಬರಗೂರು, ಧರ್ಮಪುರಿ ಮುಂತಾದ ಕಡೆ ದೇವಾಲಯಗಳನ್ನು ಕಟ್ಟಿಸಿದ. ಇವನ ನಂತರ ಬಂದ ರಾಜರೂ ಆವನಿ, ಹೇಮಾವತಿ ಮುಂತಾದ ಕಡೆಗಳಲ್ಲಿ ದೇವಾಲಯಗಳನ್ನೂ, ಕೆರೆಗಳನ್ನೂ, ಕಟ್ಟಿಸಿದರು. ಇವರ ಮುದ್ರೆ ಮಲಗಿದ ಬಸವ.

ಅಳುಪರು

ಅಳುಪರು ಬನವಾಸಿ ಕದಂಬರ ಸಾಮಂತರಾಗಿದ್ದವರು. ಈ ವಂಶವು ಕರ್ನಾಟಕವನ್ನು ಬಹಳ ಕಾಲ ಆಳಿದ ರಾಜವಂಶಗಳಲ್ಲಿ ಒಂದು. ಇವರು ಸ್ವತಂತ್ರರಾಗಿ ರಾಜ್ಯಭಾರ ಮಾಡಲಿಲ್ಲ. ಮಾಂಡಲೀಕರಾಗಿಯೇ ಆಳಿದರು. ಇವರ ಆಳ್ವಿಕೆ ಬಹುತೇಕ ಈಗಿನ ಮಲೆನಾಡು ಮತ್ತು ಕರಾವಳಿಗೆ ಸೀಮಿತವಾಗಿತ್ತು. ಆಳ್ವಖೇಡ ಎಂಬುದು ಇವರು ಆಳಿದ ನಾಡಿಗೆ ಇದ್ದ ಹೆಸರು. ಇವರ ರಾಜಧಾನಿ ಉದಯಾವರ. ಇವರು ಮುದ್ರೆಗಳಲ್ಲಿ ಬಳಸಿದ ಗುರುತು ಜೋಡಿಮೀನು.

ಸೇಂದ್ರಕರು

ಇವರು ನಾಗವಂಶಕ್ಕೆ ಸೇರಿದವರು. ಕರ್ನಾಟಕದ ಪ್ರಾಚೀನ ಮನೆತನಗಳಲ್ಲಿ ಇದೂ ಒಂದು. ಇವರ ಲಾಂಛನ ಆನೆ. ಇವರು ಆಳಿದ ರಾಜ್ಯವನ್ನು ನಾಗರಖಂಡ ಎಂದು ಕರೆಯುತ್ತಿದ್ದರು. ಇದು ಶಿವಮೊಗ್ಗ ಜಿಲ್ಲೆಯಲ್ಲಿ ಬರುತ್ತದೆ. ಇವರು ಕದಂಬರ ಹಾಗೂ ಚಾಲುಕ್ಯರ ಮಾಂಡಲೀಕರಾಗಿದ್ದರು.

ಪುನ್ನಾಡ ಅರಸರು

ಪುನ್ನಾಡು ರಾಜ್ಯವು ಈಗಿನ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆಯ ಭಾಗವಾಗಿತ್ತು. ಕಬಿನೀ ತೀರದಲ್ಲಿನ ಕಿತ್ತೂರು ಈ ರಾಜ್ಯದ ರಾಜಧಾನಿ. ತಮ್ಮನ್ನು ತಾಮ್ರಕಶ್ಯಪ ಕುಲದವರೆಂದು ಹೇಳಿಕೊಂಡಿದ್ದಾರೆ. ಗಂಗ ವಂಶದ ರಾಜ ಅವಿನೀತನು ಪುನ್ನಾಡಿನ ಸ್ಕಂಧವರ್ಮನ ಮಗಳನ್ನು ಮದುವೆಯಾಗಿದ್ದ. ಮುಂದೆ ಪುನ್ನಾಡಸೀಮೆ ಗಂಗ ಸಾಮ್ರಾಜ್ಯದಲ್ಲಿ ಸೇರಿ ಹೋಯಿತು.

ಈ ಮೇಲಿನವರಲ್ಲದೆ ಎರಿಗಲವಾಡಿಯ ಚೋಳರು, ನಳರು, ಬಾಣರು, ಮುಂತಾದವರು ಕರ್ನಾಟಕದಲ್ಲಿ ಆಗಿಹೋದ ಸಾಮಂತ ರಾಜರು.

ಕಲ್ಯಾಣದ ಚಾಲುಕ್ಯರು

ರಾಷ್ಟ್ರಕೂಟರ ನಂತರ ಮತ್ತೆ ಚಾಲುಕ್ಯ ಸಾಮ್ರಾಜ್ಯ ತಲೆ ಎತ್ತಿತು. ರಾಷ್ಟ್ರಕೂಟದ ದೊರೆ ಕಕ್ಕಲನನ್ನು ಚಾಲುಕ್ಯ ಇಮ್ಮಡಿ ತೈಲಪನು ಕೊಂದು ತಾನು ಅಧಿಕಾರಕ್ಕೆ ಬಂದ. ಪ್ರಾರಂಭದಲ್ಲಿ ಮಾನ್ಯಖೇಟವೇ ಇವರ ರಾಜಧಾನಿಯಾಗಿತ್ತು. ಮುಂದೆ ಕಲ್ಯಾಣಕ್ಕೆ ಬದಲಾಯಿತು. ಈ ಇಮ್ಮಡಿ ತೈಲಪನು ಮೊದಲು ರಾಷ್ಟ್ರಕೂಟರ ಸಾಮಂತನಾಗಿದ್ದ. ಇವನ ಮಗ ಇರಿವಬೆಡಂಗ ಸತ್ಯಾಶ್ರಯ. ಇವನ ಆಶ್ರಯದಲ್ಲಿ ಕವಿ ರನ್ನನು ಗದಾಯುದ್ಧವೆಂಬ ಕಾವ್ಯ ಬರೆದನು. ಮುಂದೆ ಈ ವಂಶದಲ್ಲಿ ಬಂದ ಇಮ್ಮಡಿ ಜಯಸಿಂಹನು, ಪಾರಮಾರರು, ಚೋಳರು ಮೊದಲಾದವರ ಮೇಲೆ ಯುದ್ಧ ಮಾಡಿದನು. ಇವನ ಕಾಲದಲ್ಲಿದ್ದ ಜೇಡರ ದಾಸಿಮಯ್ಯನೆಂಬ ಶರಣನು, ಜಯಸಿಂಹನ ರಾಣಿ ಸುಗ್ಗಲೆಗೆ ಗುರುವಾಗಿದ್ದ. ಜಯಸಿಂಹನ ಮಗನಾದ ಒಂದನೆಯ ಸೋಮೇಶ್ವರನೂ ಚೋಳರ ಮೇಲೆ ಯುದ್ಧವನ್ನು ಮಾಡಿದನು.

ಈ ವಂಶದಲ್ಲಿ ಮುಂದೆ ಬಂದ ಹೆಸರುವಾಸಿಯಾದ ರಾಜನೆಂದರೆ ಆರನೆಯ ವಿಕ್ರಮಾದಿತ್ಯ. ಆರನೆಯ ವಿಕ್ರಮಾದಿತ್ಯನು ಶಿಲಾಹಾರರು, ಹೊಯ್ಸಳರು, ಪಾರಮಾರರು ಮುಂತಾದ ಅರಸರನ್ನು ಯುದ್ಧದಲ್ಲಿ ಎದುರಿಸಿದನು. ಈತ ಅನೇಕ ಯುದ್ಧಗಳಲ್ಲಿ ಗೆಲುವನ್ನು ಪಡೆದು ರಾಜ್ಯದಲ್ಲಿ ಶಾಂತಿಯನ್ನು ನೆಲೆಗೊಳಿಸಿದ. ಸುಮಾರು ಐವತ್ತು ವರ್ಷಗಳ ಕಾಲ ರಾಜ್ಯಭಾರ ಮಾಡಿದ. ವಿಜ್ಞಾನೇಶ್ವರನೆಂಬ ಕವಿ ಇವನ ಆಸ್ಥಾನದಲ್ಲಿದ್ದ. ಇವನು, 'ಪ್ರಪಂಚದಲ್ಲಿ ಕಲ್ಯಾಣದಂತಹ ಪಟ್ಟಣವು ಹಿಂದೆಂದೂ ಇರಲಿಲ್ಲ. ಮುಂದೆಯೂ ಇರುವುದಿಲ್ಲ. ವಿಕ್ರಮಾರ್ಕನಂತಹ ಭೂಪಾಲನನ್ನು ನೋಡದವರು ಕೇಳದವರು ಇಲ್ಲ' ಎಂದು ಹೊಗಳಿದ್ದಾನೆ. ಇವನ ಆಸ್ಥಾನ ಕವಿಯಾದ ಬಿಲ್ಲಣನು ವಿಕ್ರಮಾದಿತ್ಯನನ್ನು ಕುರಿತು 'ವಿಕ್ರಮಾಂಕದೇವ ಚರಿತ' ಎಂಬ ಗ್ರಂಥವನ್ನು ರಚಿಸಿದ್ದಾನೆ.

ವಿಕ್ರಮಾದಿತ್ಯನು ತಾನು ಪಟ್ಟಕ್ಕೆ ಬಂದ ನೆನಪಿನಲ್ಲಿ ಚಾಲುಕ್ಯ ವಿಕ್ರಮ ಶಕೆ ಎಂಬುದನ್ನು ಕ್ರಿ.ಶ. ಒಂದು ಸಾವಿರದ ಎಪ್ಪತ್ತಾರರಲ್ಲಿ ಪ್ರಾರಂಭಿಸಿದನು. ಆರನೆಯ ವಿಕ್ರಮಾದಿತ್ಯನ

ನಂತರ ಅವನ ಮಗನಾದ ಮುಮ್ಮಡಿ ಸೋಮೇಶ್ವರನು ಪಟ್ಟಕ್ಕೆ ಬಂದನು. ಈತನ ಕಾಲವು ಶಾಂತಿಯಿಂದ ಕೂಡಿತ್ತು. ಇವನು 'ಮಾನಸೋಲ್ಲಾಸ' ಎಂಬ ಸಂಸ್ಕೃತ ಗ್ರಂಥವನ್ನು ಬರೆದಿದ್ದಾನೆ. ಇವನ ನಂತರ ಬಂದ ರಾಜರು ಅಸಮರ್ಥರಾಗಿದ್ದರು. ಹೀಗಾಗಿ ಇವರ ಸಾಮಂತನಾಗಿದ್ದ ಕಳಚೂರಿ ಬಿಜ್ಜಳನು ಇವರನ್ನು ಸಿಂಹಾಸನದಿಂದ ತಳ್ಳಿ ತಾನೇ ರಾಜನಾದ.

ಕಲ್ಯಾಣದ ಚಾಲುಕ್ಯರಿಗೆ ಉಚ್ಚಂಗಿಯ ಪಾಂಡ್ಯರು, ಗೋವೆಯ ಕದಂಬರು, ಹೊಯ್ಸಳರು, ಸೇವುಣರು, ವೆಂಗಿ ಚಾಲುಕ್ಯರು ಮುಂತಾದವರು ಮಾಂಡಲೀಕರಾಗಿದ್ದರು. ಈ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಹೆಚ್ಚಾಗಿ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಪ್ರತಿನಿಧಿಸುವ ದೇವಾಲಯಗಳು ನಿರ್ಮಾಣವಾದವು. ಇವುಗಳಲ್ಲಿ ಮೂರು ಗರ್ಭಗುಡಿಗಳು ಇರುತ್ತವೆ. ಕರ್ನಾಟಕದಲ್ಲಿ ಈ ದೇವಾಲಯಗಳು ತಮ್ಮದೇ ಆದ ವಿಶೇಷ ರೀತಿಯನ್ನು ಹೊಂದಿವೆ. ಇವು ಕಲ್ಯಾಣ ಚಾಲುಕ್ಯರು ನೀಡಿದ ಕೊಡುಗೆ.

ಕಳಚೂರಿಗಳು

ಕರ್ನಾಟಕದಲ್ಲಿನ ಕಳಚೂರ್ಯರು ಮಧ್ಯಪ್ರದೇಶದ ಹೈಹೇಯ ಕುಲಕ್ಕೆ ಸೇರಿದವರು. ಇವರ ಒಂದು ಶಾಖೆ ಕರ್ನಾಟಕಕ್ಕೆ ವಲಸೆ ಬಂತು. ಇವರು ಶೈವರು. ಪ್ರಾರಂಭದಲ್ಲಿ ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದು ಮಂಗಳವೇಡೆಯಲ್ಲಿ ಆಳುತ್ತಿದ್ದರು. ಈ ವಂಶದಲ್ಲಿ ಬಂದ ಎರಡನೇ ಬಿಜ್ಜಳನು ಕೆಲವು ಕಾಲ ಮಾಂಡಲೀಕನಾಗಿ ರಾಜ್ಯಭಾರ ಮಾಡಿದ. ಈತ ಕಲ್ಯಾಣದ ಚಾಲುಕ್ಯರು ಶಕ್ತಿಹೀನರಾದಾಗ ಅವರನ್ನು ಮೂಲೆಗೆ ತಳ್ಳಿ ತಾನೇ ರಾಜನಾದ. ಈತನ ಮಂತ್ರಿ ಬಸವಣ್ಣನು ವೀರಶೈವ ಧರ್ಮದ ಚಳುವಳಿಗೆ ಮುಂದಾಳಾಗಿ ನಿಂತ. ಈ ಚಳುವಳಿಯನ್ನು ವಿರೋಧಿಸಿದಾಗ ಬಿಜ್ಜಳನ ಕೊಲೆಯಾಯಿತು. ಹಾಗೆಯೇ ಬಸವಣ್ಣನವರ ಅಂತ್ಯವೂ ಆಯಿತು. ಮುಂದೆ ಕಲ್ಯಾಣದ ಚಾಲುಕ್ಯರನ್ನು ಸಿಂಹಾಸನದ ಮೇಲೆ ಕುಳ್ಳಿಸಲಾಯಿತು. ಆದರೂ ಕಲ್ಯಾಣದ ಚಾಲುಕ್ಯರ ಪ್ರಭಾವ ಕಡಿಮೆಯಾಯಿತೆಂದೇ ಹೇಳಬೇಕು. ಮಾಂಡಲೀಕರು ಪ್ರಾಬಲ್ಯ ಹೊಂದಿ ಸ್ವತಂತ್ರರಾದರು. ರಾಜ್ಯವು ಬೇರೆ ಬೇರೆ ಸಣ್ಣ ರಾಜ್ಯಗಳಾಗಿ ಒಡೆದು ಹೋಯಿತು. ಸುಮಾರು ಎಂಟು ನೂರು ವರ್ಷಗಳ ಹಿಂದೆ ಕಲ್ಯಾಣದಲ್ಲಿ ನಡೆದ ವೀರಶೈವ ಧಾರ್ಮಿಕ ಚಳುವಳಿಯು ಸಮಾಜದಲ್ಲಿ ಚೈತನ್ಯವನ್ನು ತುಂಬಿತು.'ದಯೆಯೇ ಧರ್ಮದ ಮೂಲ',

'ಆಚಾರವೇ ಸ್ವರ್ಗ ಅನಾಚಾರವೇ ನರಕ', 'ಕಾಯಕವೇ ಕೈಲಾಸ' ಮುಂತಾದ ಹೊಸ ಮಾತುಗಳು ಜನಪ್ರಿಯವಾದವು. ಆಗ ತಾನೆ ಉದಿಸಿದ ಹೊಸ ಮತಕ್ಕೆ ಎಲ್ಲೆಡೆ ಜನಬೆಂಬಲ ದೊರೆಯಿತು. ಇದರೊಂದಿಗೆ ಕನ್ನಡ ಸಾಹಿತ್ಯದಲ್ಲಿ ವಚನವೆಂಬ ಹೊಸ ಪ್ರಕಾರದ ರಚನೆಗಳು ರಚಿತವಾದವು. ಹೊಸ ಹೊಸ ವಿಚಾರಗಳ ಕಡೆಗೆ ಜನರು ಮನಸ್ಸು ಕೊಟ್ಟರು. ಹೀಗೆ ಧರ್ಮ ಹಾಗೂ ಸಾಹಿತ್ಯಗಳೆರಡರಲ್ಲೂ ಈ ಕಾಲ ಬಹು ಮುಖ್ಯವಾದದ್ದು.

ಸೇವುಣರು

ಸೇವುಣರು ಕಲ್ಯಾಣ ಚಾಲುಕ್ಯರ ಮಾಂಡಲೀಕರು. ಇವರ ರಾಜಧಾನಿ ಮಹಾರಾಷ್ಟ್ರದ ದೇವಗಿರಿ. ಇವರ ಮೊದಲ ರಾಜಧಾನಿ ಬಿಜಾಪುರ ಜಿಲ್ಲೆಯ 'ತದವಲಗಾ' ಎಂಬುದು. ಸೇವುಣರನ್ನು ಯಾವದರೆಂದೂ ಕರೆದಿರುತ್ತಾರೆ. ಕಲಚೂರ್ಯರ ಪತನದ ನಂತರ ಇವರು ಸ್ವತಂತ್ರರಾದರು. ಹೊಯ್ಸಳರು ಸೇವುಣ ಭಿಲ್ಲಮನ ಮೇಲೆ ಸೊರಟೂರಿನಲ್ಲಿ ಯುದ್ಧ ಮಾಡಿದರು. ಈ ಯುದ್ಧದಲ್ಲಿ ಭಿಲ್ಲಮನು ಸೋತು ಹೋದ. ಲಕ್ಕುಂಡಿವರೆಗಿನ ರಾಜ್ಯ ಹೊಯ್ಸಳ ಬಲ್ಲಾಳನ ವಶಕ್ಕೆ ಬಂತು. ಈ ಭಿಲ್ಲಮನೇ ದೇವಗಿರಿಯನ್ನು ತನ್ನ ರಾಜಧಾನಿಯಾಗಿ ಆಯ್ದುಕೊಂಡ. ಸೇವುಣರು ದಕ್ಷಿಣದಲ್ಲಿ ಹೋಯ್ಸಳರ ಮೇಲೂ, ಪೂರ್ವದಲ್ಲಿ ಕಾಕತೀಯರ ಮೇಲೂ ಯುದ್ಧ ಮಾಡಿದರು. ಇವನ ವಂಶದ ಸಿಂಪಣನು ಮಹಾಪರಾಕ್ರಮಿ. ಇದೇ ವಂಶದಲ್ಲಿ ಬಂದ ಅರಸು ಮಹಾದೇವ. ಈತನು ಕಾಕತೀಯ ರುದ್ರಮದೇವಿಯ ಕೈಲಿ ಸೋಲನ್ನು ಅನುಭವಿಸಿದ. ಮುಂದೆ ಇವರ ರಾಜ್ಯ ಶಿಥಿಲವಾಗುತ್ತಾ ಬಂದಿತು. ಸೇವುಣರ ರಾಜ್ಯದ ಮೇಲೆ ಮುಸಲ್ಮಾನ ಅರಸರು ದಂಡಯಾತ್ರೆ ಮಾಡಿದರು. ಈ ಯುದ್ಧದಲ್ಲಿ ಸೇವುಣರು ಸೋತರು. ಇಲ್ಲಿಂದಾಚೆಗೆ ಕರ್ನಾಟಕದ ಉತ್ತರ ಭಾಗ ಮುಸಲ್ಮಾನರ ಆಳ್ವಿಕೆಗೆ ಒಳಗಾಯಿತು.

ಹೊಯ್ಸಳರು

ಹೊಯ್ಸಳರು ಗಂಗರಾಜರ ಮಾಂಡಲೀಕರು. ಇವರ ಮೊದಲ ರಾಜಧಾನಿ ಅಂಗಡಿ ಗ್ರಾಮ. ಇದಕ್ಕೆ ಸೊಸೆವೂರು ಎಂಬ ಹೆಸರೂ ಇತ್ತು. ಇವರ ಮೂಲದ ಬಗ್ಗೆ ಒಂದು ಕಥೆ ಇದೆ. ಅಂಗಡಿಗ್ರಾಮದಲ್ಲಿ ವಾಸಂತಿಕಾ ದೇವಾಲಯವೊಂದಿತ್ತು. ಅಲ್ಲಿನ ಜೈನ ಮುನಿಗಳು

ಒಂದು ದಿನ ಧರ್ಮತತ್ವಗಳ ಬಗ್ಗೆ ಮಾತನಾಡುತ್ತಿದ್ದರು. ಅಲ್ಲಿ ಸಳ ಎಂಬುವವನಿದ್ದ. ಸಳನು ಜೈನ ಮುನಿಗಳ ಪ್ರವಚನ ಕೇಳುತ್ತಿದ್ದ. ಆಗ ಹುಲಿಯೊಂದು ಕಾಣಿಸಿಕೊಂಡಿತು. ಮುನಿಯು ತನ್ನ ಕೈಯಲ್ಲಿದ್ದ ಬೆತ್ತವನ್ನು ಸಳನ ಕೈಗೆ ನೀಡಿ ' ಹೊಯ್ ಸಳ' ಎಂದ. ಸಳನು ಬೆತ್ತದಿಂದ ಹುಲಿಯನ್ನು ಕೊಂದ. ಅಂದಿನಿಂದ ಅವನ ವಂಶಕ್ಕೆ ಹೊಯ್ಸಳ ಎಂಬ ಹೆಸರೇ ಬಂತು.

ನೃಪಕಾಮ ಎಂಬುವನು ಈ ವಂಶದ ಮೊದಲ ಚಾರಿತ್ರಿಕ ವ್ಯಕ್ತಿ. ಚೋಳರು ಗಂಗವಾಡಿಗೆ ನುಗ್ಗಿದಾಗ ಅವರನ್ನು ಈತ ಎದುರಿಸಿರಬಹುದು. ಇವನ ಮಗ ವಿನಯಾದಿತ್ಯ. ಈತ ಚೋಳರೊಡನೆ ಚಾಲುಕ್ಯರ ಪರವಾಗಿ ಹೋರಾಡಿದ. ಚಾಲುಕ್ಯರ ಪರವಾಗಿ ಅವರ ಅನೇಕ ಯುದ್ಧಗಳಲ್ಲಿ ಈತ ಭಾಗವಹಿಸಿದ. ಈ ವಿನಯಾದಿತ್ಯನ ಕಾಲದಲ್ಲಿ ರಾಜಾಧಾನಿಯು ಬೇಲೂರಿಗೆ ಬದಲಾಯಿತು. ಇವನು ಸುಮಾರು ಐವತ್ತು ವರ್ಷಗಳಷ್ಟು ದೀರ್ಘಕಾಲ ರಾಜ್ಯಭಾರ ಮಾಡಿದ. ಮುಂದೆ ಒಂದನೆಯ ಬಲ್ಲಾಳನು ಪಾರಮಾರ ಜಗದೇವನನ್ನು ಸೋಲಿಸಿದ. ಚಾಲುಕ್ಯರ ರಾಜ್ಯದ ಕೆಲವು ಭಾಗಗಳನ್ನು ಗೆಲ್ಲಲು ಯತ್ನಿಸಿದ. ಆದರೆ ಅದು ಸಾಧ್ಯವಾಗಲಿಲ್ಲ. ಇವನ ನಂತರ ಇವನ ತಮ್ಮನಾದ ವಿಷ್ಣುವರ್ಧನನು ಪಟ್ಟಕ್ಕೆ ಬಂದ. ಪಟ್ಟಕ್ಕ ಬಂದ ಕೂಡಲೇ ತಲಕಾಡಿನ ಬಿಡುಗಡೆಗೆ ಗಮನ ಹರಿಸಿದ. ತಲಕಾಡು, ಕೋಲಾರ, ನಂಗಲಿ ಮುಂತಾದವು ಇವನ ವಶವಾದವು. ಉಚ್ಚಂಗಿಯ ಪಾಂಡ್ಯ ರಾಜ್ಯರನ್ನು ಗೆದ್ದ. ಹಾನಗಲ್ಲು ಕದಂಬವನ್ನೂ ಗೆದ್ದ. ಆದರೆ ಕಲ್ಯಾಣ ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯ ಇವನ ಮೇಲೆ ಸೈನ್ಯ ಕಳುಹಿಸಿದ. ಅದು ವಿಷ್ಣುವರ್ಧನನ್ನು ಸೋಲಿಸಿತು. ಹೀಗೆ ಹೊಯ್ಸಳರು ಸ್ವತಂತ್ರರಾಗುವ ಕನಸನ್ನು ಈ ಸೋಲು ತಡೆಯಿತು. ವಿಷ್ಣುವರ್ಧನನಿಗೆ ಶಾಂತಲಾದೇವಿ, ಲಕ್ಷ್ಮೀದೇವಿ ಮತ್ತು ಬಮ್ಮಲಾದೇವಿ ಎಂದು ಮೂವರು ಪತ್ನಿಯರು. ವಿಷ್ಣುವರ್ಧನನು ಬೇಲೂರಿನಲ್ಲಿ ವಿಷ್ಣುದೇವಾಲಯವನ್ನು ಕಟ್ಟಲು ಆರಂಭಿಸಿದ.

ವಿಷ್ಣುವರ್ಧನನ ನಂತರ ಇವನ ಮಗನಾದ ಒಂದನೇ ನರಸಿಂಹ ಪಟ್ಟಕ್ಕೆ ಬಂದನು. ಇವನ ರಾಜ್ಯಾಡಳಿತ ಸರಿಯಿರಲಿಲ್ಲ. ಈ ನರಸಿಂಹನ ಮಗನಾದ ಎರಡನೇ ಬಲ್ಲಾಳನೇ ತಂದೆ ವಿರುದ್ಧ ದಂಗೆ ಎದ್ದ. ತನ್ನ ತಂದೆಯ ಕಾಲದಲ್ಲಿ ಕೈ ತಪ್ಪಿ ಹೋಗಿದ್ದ ಚೆಂಗಾಳ್ವ,

ಕೊಂಗಾಳ್ವರನ್ನು ಗೆದ್ದ. ಉಚ್ಚಂಗಿಯನ್ನು ತನ್ನ ವಶ ಮಾಡಿಕೊಂಡ. ಸೇವುಣ ಭಿಲ್ಲಮನನ್ನು ಸೊರಟೂರು ಕಾಳಗದಲ್ಲಿ ಸೋಲಿಸಿದ. ಉತ್ತರದಲ್ಲಿ ಲಕ್ಕುಂಡಿಯವರೆಗಿನ ರಾಜ್ಯ ಬಲ್ಲಾಳನ ವಶವಾಯಿತು. ದಕ್ಷಿಣದಲ್ಲಿದ್ದ ಚೋಳರು ಈ ವೇಳೆಗೆ ಹೊಯ್ಸಳರ ಸಂಬಂಧಿಗಳಾಗಿದ್ದರು. ಚೋಳರ ಮೇಲೆ ದಂಡೆತ್ತಿ ಬಂದಿದ್ದ ಪಾಂಡ್ಯರನ್ನು ಹೊಯ್ಸಳರು ಸೋಲಿಸಿದರು. ಹೀಗಾಗಿ ಇವರು ಚೋಳರಾಜ್ಯ ಪ್ರತಿಪಾದಕರೆಂಬ ವಿಶೇಷಣವನ್ನು ಪಡೆದರು.

ಇಮ್ಮಡಿ ಬಲ್ಲಾಳನ ನಂತರ ಪಟ್ಟಕ್ಕೆ ಬಂದ ಇಮ್ಮಡಿ ನರಸಿಂಹನು ಚೋಳರ ರಾಜ್ಯವನ್ನು ರಕ್ಷಿಸುವುದರಲ್ಲಿಯೇ ಕಾಲ ಕಳೆದ. ಮಹೇಂದ್ರಮಂಗಲ ಕದನದಲ್ಲಿ ಸುಂದರಪಾಂಡ್ಯನನ್ನು ಸೋಲಿಸಿದ. ಮುಂದೆ ನರಸಿಂಹನ ಮಗ ಸೋಮೇಶ್ವರ ರಾಜ್ಯವನ್ನು ಎರಡು ಭಾಗ ಮಾಡಿದ. ಉತ್ತರದ ಭಾಗವನ್ನು ಮುಮ್ಮಡಿ ನರಸಿಂಹನಿಗೂ ದಕ್ಷಿಣದ ಭಾಗವನ್ನು ರಾಮನಾಥನಿಗೂ ಹಂಚಿದ. ಹೀಗಾಗಿ ರಾಜ್ಯ ದುರ್ಬಲವಾಗಿ ರಾಜ್ಯದ ಶಕ್ತಿ



ಹೊಯ್ಸಳರ ಕಲೆ - ಹಳೇಬೀಡು

ಕುಂದುತ್ತಾ ಹೋಯಿತು. ಮುಂದೆ ಬಂದ ರಾಜರೂ ಶಕ್ತರಾಗಿರಲಿಲ್ಲ. ಉತ್ತರದಿಂದ ಬಂದ ಮಹಮದೀಯರ ದಾಳಿಯನ್ನು ತಡೆಯಲು ಇವರಿಂದ ಸಾಧ್ಯವಾಗಲಿಲ್ಲ. ಇವರ ರಾಜಧಾನಿ ದ್ವಾರಸಮುದ್ರವು ಮುಸಲ್ಮಾನರ ಧಾಳಿಗೆ ತುತ್ತಾಯಿತು. ಅಲ್ಲಿಂದ ಮುಂದೆ ಈ ಊರು ಹಳೆಯಬೀಡು ಎಂದು ಹೆಸರಾಯಿತು. ಒಂದು ಸಾವಿರದ ಮುನ್ನೂರ ಮೂವತ್ತರ ವೇಳೆಗೆ ದಕ್ಷಿಣ ಭಾರತದ ಅನೇಕ ರಾಜ್ಯಗಳು ಈ ಮುಸಲ್ಮಾನರ ದಾಳಿಯಿಂದ ಹಾಳಾಗಿದ್ದವು.

ಹೊಯ್ಸಳ ಕಲೆ

ಹೊಯ್ಸಳರು ಮೊದಲಿಗೆ ಕಲ್ಯಾಣ ಚಾಲುಕ್ಯರ ಮಾಂಡಲೀಕರು. ಹೀಗಾಗಿ ಚಾಲುಕ್ಯರ ದೇವಾಲಯಗಳ ರೀತಿಯಲ್ಲಿ ತಾವೂ ದೇವಾಲಯಗಳನ್ನು ಕಟ್ಟಿಸಿದರು. ಆದರೆ ಅಲ್ಪಸ್ವಲ್ಪ ಮಾರ್ಪಾಟನ್ನೂ ಮಾಡಿಕೊಂಡರು. ಈ ಬಗೆಯ ದೇವಾಲಯಗಳನ್ನು ಹೊಯ್ಸಳರ ದೇವಾಲಯಗಳೆನ್ನುತ್ತೇವೆ. ಇವು ನಕ್ಷತ್ರಾಕಾರದ ವೇದಿಕೆ, ಅದರ ಮೇಲೆ ತ್ರಿಕೋಣ ಮಾದರಿಯ ಶಿಖರವನ್ನು ಹೊಂದಿವೆ. ಶಿಲ್ಪ ಪಟ್ಟಿಕೆಗಳು, ಗೋಡೆಗಳಲ್ಲಿ ಉಬ್ಬು ಶಿಲ್ಪಗಳು, ಮುಂತಾದ ಅಲಂಕಾರಗಳನ್ನು ಕಾಣಬಹುದು. ದೇವಾಲಯದ ಒಳಗೆ ನುಣ್ಣಗೆ ಇರುವ ತಿರುಗಣೆಯಿಂದ ಮಾಡಿದ ದುಂಡನೆಯ ಕಂಬಗಳಿವೆ. ದೇವಾಲಯಗಳನ್ನು ಕಟ್ಟಲು ಬಳಸಿದ ಕಲ್ಲು, ಬಳಪದ ಕಲ್ಲು, ಬೇಲೂರು, ಹಳೇಬೀಡು, ಸೋಮನಾಥಪುರ, ಮುಂತಾದ ಕಡೆ ಇವರ ಕಾಲದ ದೇವಾಲಯಗಳಿವೆ. ಇವರ ಕಾಲದ ಅನೇಕ ದೇವಾಲಯಗಳ ಮೇಲೆ ಸಳನು ಹುಲಿಯನ್ನು ಕೊಲ್ಲುತ್ತಿರುವ ಶಿಲ್ಪವನ್ನು ಬಿಡಿಸಲಾಗಿದೆ. ಹೊಯ್ಸಳರ ರೀತಿಯ ದೇವಾಲಯಗಳು ಕರ್ನಾಟಕಕ್ಕೆ ಅವರು ನೀಡಿದ ಕೊಡುಗೆ. ರಾಮಾನುಜರ ಪ್ರಭಾವದಿಂದ ಇವರ ಕಾಲದಲ್ಲಿ ಶ್ರೀವೈಷ್ಣವ ಧರ್ಮ ಬೆಳೆಯಿತು.

ವಿಜಯನಗರ

ವಿಜಯನಗರದ ಸ್ಥಾಪನೆ ಹರಿಹರ ಮತ್ತು ಅವನ ಸೋದರರಿಂದ ಆಯಿತು. ಇವರು ಮೊದಲಿಗೆ ಹೊಯ್ಸಳರ ಮಾಂಡಲೀಕರಾಗಿದ್ದರು. ಹೊಯ್ಸಳರ ಪತನದ ನಂತರ ಇವರು ಸ್ವತಂತ್ರರಾದರು. ಇವರ ರಾಜಧಾನಿ ವಿಜಯನಗರ. ಇಂದಿಗೆ ಸುಮಾರು ಆರುನೂರಾ ಅರವತ್ತು ವರ್ಷಗಳ ಹಿಂದೆ ಈ ರಾಜ್ಯ ಸ್ಥಾಪನೆಯಾಯಿತು. ಈ ರಾಜ್ಯ ಸ್ಥಾಪನೆಗೆ ಶೃಂಗೇರಿಯ ಗುರುಗಳಾದ ವಿದ್ಯಾರಣ್ಯರು ಕಾರಣರೆಂಬ ಕಥೆ ಇದೆ. ಹಂಪೆಯ ವಿರೂಪಾಕ್ಷ ಈ ಅರಸರ



ಉಗ್ರನರಸಿಂಹ - ಹಂಪೆ

ಪ್ರಮುಖ ದೈವ. ಈ ಅರಸರು ಮುದ್ರೆಯಲ್ಲಿ ಬಳಸಿದ ಗುರುತು ಹಂದಿ. ಈ ರಾಜ್ಯವನ್ನು ಸಂಗಮ, ಸಾಳುವ, ತುಳುವ ಮತ್ತು ಅರವೀಡು ಎಂಬ ನಾಲ್ಕು ವಂಶದ ಅರಸರು ಆಳಿದರು.

ಸಂಗಮ ವಂಶದ ಅರಸರಲ್ಲಿ ಒಂದನೇ ಹರಿಹರ ಮೊದಲಿಗ. ಈತನು ತನ್ನ ತಮ್ಮಂದಿರ ಸಹಾಯದಿಂದ ರಾಜ್ಯ ಸ್ಥಾಪಿಸಿದ. 'ಹಿಂದೂರಾಯಸುರತ್ರಾಣ' ಎಂಬುದು ಇವನಿಗಿದ್ದ ಬಿರುದು. ಇದನ್ನು ಈ ವಂಶದ ಎಲ್ಲಾ ಅರಸರೂ ಧರಿಸಿದರು. ಈತ ಅಧಿಕಾರಕ್ಕೆ ಬಂದ ಹತ್ತು ವರ್ಷಗಳ ನಂತರ ಬಹುಮನಿ ಸಾಮ್ರಾಜ್ಯ ಉದಿಸಿತು. ಇಲ್ಲಿಂದ ಎರಡೂ ರಾಜ್ಯಗಳಲ್ಲಿ ಆಗಾಗ್ಗೆ ಯುದ್ಧಗಳು ನಡೆಯುತ್ತಿದ್ದವು. ಹಿಂದಿನ ಹೊಯ್ಸಳರ ಸಾಮ್ರಾಜ್ಯದ ಅನೇಕ ಭಾಗಗಳು ಇವರ ವಶವಾದವು. ಇವನ ನಂತರ ಇವನ ತಮ್ಮ ಬುಕ್ಕನು ಅಧಿಕಾರಕ್ಕೆ ಬಂದ. ಅಧಿಕಾರಕ್ಕೆ ಬಂದ ಮೇಲೆ ತೊಂಡಮಂಡಲದ ಶಂಭವರಾಯನನ್ನು ಮತ್ತು ಮಧುರೆಯ ಸುಲ್ತಾನನ್ನು ಸೋಲಿಸಿದನು. ಈ ಯುದ್ಧದಲ್ಲಿ ಇವನ ಮಗ ಕಂಪಣನು ಭಾಗವಹಿಸಿದ್ದ. ಕಂಪಣನ ಪತ್ನಿ ಗಂಗಾದೇವಿಯೂ ಈ ಯುದ್ಧದಲ್ಲಿ ಗಂಡನ ಸಂಗಡ ಇದ್ದಳು. ಈಕೆ ತನ್ನ ಗಂಡನ ಸಾಹಸವನ್ನು ಕುರಿತು ಒಂದು ಗ್ರಂಥವನ್ನು ಬರೆದಿದ್ದಾಳೆ. 'ವೀರಕಂಪಣರಾಯ ಚರಿತಂ' ಎಂದು ಅದರ ಹೆಸರು. ಬುಕ್ಕನ ಕಾಲದಲ್ಲೂ ಬಹುಮನಿಯವರೊಡನೆ ಯುದ್ಧಗಳು ನಡೆದವು. ಇವನ ಕಾಲದಲ್ಲಿ ವೈಷ್ಣವ ಮತ್ತು ಜೈನ ಮತಗಳ ನಡುವೆ ಜಗಳಗಳು ನಡೆದವು. ಅರಸನು ಇಬ್ಬರಿಗೂ ನ್ಯಾಯ ನೀಡಿ ಜಗಳವನ್ನು ಕೊನೆಗಾಣಿಸಿದ.

ಬುಕ್ಕನ ನಂತರ ಅನೇಕ ಅರಸರು ರಾಜ್ಯಭಾರ ಮಾಡಿದರು. ಅವರಲ್ಲಿ ಇಮ್ಮಡಿ ದೇವರಾಯ ಪ್ರಮುಖನಾದವನು. ಈತನಿಗೆ ಪ್ರೌಢದೇವರಾಯ, ಪ್ರತಾಪದೇವರಾಯ, ಗಜಬೇಂಟೆಕಾರ ಎಂಬ ಬಿರುದುಗಳಿದ್ದವು. ಈತನ ಕಾಲದಲ್ಲಿ ರಾಜ್ಯದ ದಕ್ಷಿಣದಲ್ಲಿ ಶಾಂತಿ ನೆಲೆಸಿತ್ತು. ಉತ್ತರದಲ್ಲಿ ಮಾತ್ರ ಬಹುಮನಿ ಮತ್ತು ಕಾಕತೀಯರೊಡನೆ ಯುದ್ಧಗಳು ನಡೆಯುತ್ತಿದ್ದವು. ಲಕ್ಕಣ್ಣ ದಂಡೇಶ ಇವನ ದಂಡಾಧಿಕಾರಿಗಳಲ್ಲಿ ಒಬ್ಬ. ಈತ ದಕ್ಷಿಣದ ಅರಸರಿಂದ ಕಪ್ಪವನ್ನು ವಸೂಲಿ ಮಾಡುತ್ತಿದ್ದನು. ಇವನು ಸಿಂಹಳದ ಅರಸನನ್ನು ಸೋಲಿಸಿದ. ಲಕ್ಕಣ್ಣನು ಬರೆದ ಗ್ರಂಥ 'ಶಿವತತ್ವ ಚಿಂತಾಮಣಿ'. ದೇವರಾಯನು ತನ್ನ ರಾಜ್ಯದಲ್ಲಿ ಅಲ್ಲಲ್ಲಿ ಸಂತೆಗಳನ್ನು ಮಾಡಿಸುತ್ತಿದ್ದ. ಇದರಿಂದ ವ್ಯಾಪಾರ ವೃದ್ಧಿಯಾಯಿತು. ಹೀಗಾಗಿ ರಾಜನ ಸಂಪತ್ತು ಹೆಚ್ಚಿತು. ತನ್ನ ಸೈನ್ಯ ಪದ್ಧತಿಯಲ್ಲಿ ಸುಧಾರಣೆ ತಂದ. ಇವನ ಕಾಲದಲ್ಲಿ ಇಟಲಿ, ಇರಾನ್ ದೇಶಗಳಿಂದ ಯಾತ್ರಿಕರು ಮತ್ತು ರಾಯಭಾರಿಗಳು ಬಂದಿದ್ದರು. ಅವರು ವಿಜಯನಗರ ರಾಜ್ಯವನ್ನು ಮತ್ತು ರಾಜನನ್ನು ವಿಶೇಷವಾಗಿ ಹೊಗಳಿದ್ದಾರೆ. 'ಪ್ರಪಂಚದಲ್ಲಿ ಇಂತಹ ಆಶ್ಚರ್ಯಕರವಾದ ಪಟ್ಟಣವನ್ನು ನೋಡಿಲ್ಲ. ಇಲ್ಲಿಯ ಅರಸನು ಭಾರತದಲ್ಲಿಯೇ ಶ್ರೇಷ್ಠನಾದವನು. ಇಲ್ಲಿಯ ಅಂಗಡಿ ಬೀದಿಗಳು, ಪೇಟೆಗಳು ವಿಶಾಲವಾದುವು. ಮುತ್ತು ರತ್ನಗಳನ್ನು ಪೇಟೆಯಲ್ಲಿ ಮಾರುತ್ತಾರೆ' ಎಂದೆಲ್ಲಾ ಹೇಳಿದ್ದಾರೆ. ಕೃಷ್ಣಾ ನದಿಯ ದಕ್ಷಿಣ

ಭಾಗವೆಲ್ಲಾ ಈ ದೇವರಾಯನ ಅಧೀನದಲ್ಲಿತ್ತು. ಈತನ ಕಾಲದಲ್ಲಿ ವಿಜಯನಗರ ಹೆಚ್ಚಿನ ಅಭಿವೃದ್ಧಿಯನ್ನು ಹೊಂದಿತ್ತು. ದೂರ ದೇಶಗಳಲ್ಲೂ ಹೆಸರುವಾಸಿಯಾಗಿತ್ತು.

ದೇವರಾಯನ ನಂತರ ಬಂದ ಅರಸರು ಅಸಮರ್ಥರಾಗಿದ್ದರು. ಹೀಗಾಗಿ ಗಡಿಪ್ರದೇಶಗಳಲ್ಲಿ ದಂಗೆಗಳಾದವು. ಕೊನೆಗೆ ಸಂಗಮ ವಂಶದ ಅರಸರ ದಂಡನಾಯಕನಾಗಿದ್ದ ಸಾಳುವನು ರಾಜರನ್ನು ಮೂಲೆಗೆ ತಳ್ಳಿದನು. ತಾನೇ ರಾಜನೆಂದು ಹೇಳಿಕೊಂಡನು. ರಾಜ್ಯದಲ್ಲಿನ ದಂಗೆಗಳನ್ನು ಅಡಗಿಸುವುದರಲ್ಲಿಯೇ ಇವನ ಕಾಲ ಮುಗಿಯಿತು. ಇವನ ನಂತರ ಬಂದ ಅರಸರು ಮತ್ತೆ ಅಸಮರ್ಥರಾಗಿದ್ದರು. ಅವರನ್ನು ಮೂಲೆಗೆ ತಳ್ಳಿ ತುಳುವ ವಂಶದ ನರಸನಾಯಕ ಅಧಿಕಾರಕ್ಕೆ ಬಂದ.




ಶ್ರೀ ಕೃಷ್ಣದೇವರಾಯ

ತುಳುವ ವಂಶದ ಅರಸರಲ್ಲಿ ಕೃಷ್ಣದೇವರಾಯನು ಬಹು ಸಮರ್ಥನಾದ ರಾಜ. ಇವನು ಈಗ್ಗೆ ಸುಮಾರು ಐನೂರು ವರ್ಷಗಳ ಹಿಂದೆ ಪಟ್ಟಕ್ಕೆ ಬಂದ. ಇವನು ಪಟ್ಟಕ್ಕೆ ಬಂದಾಗ ರಾಜಕೀಯ ಪರಿಸ್ಥಿತಿ ಸರಿಯಿರಲಿಲ್ಲ. ಅದನ್ನು ಸರಿಪಡಿಸುವ ಕಡೆಗೆ ಈತ ಗಮನ

ಹರಿಸಿದ. ಉಮ್ಮತ್ತೂರಿನ ಪಾಳೆಗಾರರನ್ನು ಸೆರೆಹಿಡಿದ. ಬಿಜಾಪುರದ ಸುಲ್ತಾನನನ್ನು ಸೋಲಿಸಿದ. ಅವನಿಂದ ರಾಯಚೂರನ್ನು ವಶಪಡಿಸಿಕೊಂಡ. ಮತ್ತೊಂದು ಮಹಾವಿಜಯವೆಂದರೆ ಕಳಿಂಗದ ಗಜಪತಿ ಅರಸನನ್ನು ಗೆದ್ದದ್ದು. ಆಂಧ್ರಪ್ರದೇಶದ ಅನೇಕ ಪ್ರಮುಖ ಕೋಟೆಗಳು ಕೃಷ್ಣದೇವರಾಯನ ವಶವಾದವು.

ದಕ್ಷಿಣ ಭಾರತದಲ್ಲಿ ರಾಯನಿಗೆ ಯಾರೂ ಎದುರಿಲ್ಲವಾದರು. ಇವನ ಆಳ್ವಿಕೆಯ ಕಾಲದಲ್ಲಿಯೇ ಪೋರ್ಚುಗೀಸರು ಗೋವೆಗೆ ಬಂದದ್ದು. ಇವನ ಕಾಲದಲ್ಲಿ ಪೋರ್ಚುಗೀಸ್



ವಿಜಯನಗರದ ಅರಸರ ಲಾಂಛನ

ರಾಯಭಾರಿಯಾಗಿ ಪೇಸ್ ಎಂಬುವವನು ವಿಜಯನಗರಕ್ಕೆ ಬಂದಿದ್ದ. ಆತನು ರಾಜನನ್ನು ಕುರಿತು 'ಆಡಳಿತದಲ್ಲಿ ನಿಪುಣನಾಗಿದ್ದ. ಉತ್ತಮ ನ್ಯಾಯಪಾಲಕನಾಗಿದ್ದ' ಎಂದು ಹೊಗಳಿದ್ದಾನೆ. ಕೃಷ್ಣದೇವರಾಯನು ಆಡಳಿತಕ್ಕೆ ಬಂದ ಮೇಲೆ ಕೆಲವು ತೆರಿಗೆಗಳನ್ನು ತೆಗೆದು ಹಾಕಿದ. ಕೆರೆಗಳನ್ನು ಕಟ್ಟಿಸಿ, ಕಾಲುವೆಗಳನ್ನು ತೋಡಿಸಿದ. ಹೀಗೆ ಜನೋಪಕಾರಿ ಕೆಲಸಗಳನ್ನು ಮಾಡಿ ಜನರಿಗೆ ಸಂತೋಷವನ್ನುಂಟು ಮಾಡಿದ. ಇವನು ಕವಿಯಾಗಿದ್ದ. ಕನ್ನಡ, ತೆಲುಗು, ಸಂಸ್ಕೃತ ಭಾಷೆಯ

ಅನೇಕ ಕವಿಗಳಿಗೆ ಈತ ಆಶ್ರಯವಿತ್ತಿದ್ದ. ಅನೇಕ ದೇವಾಲಯಗಳಿಗೆ ಗೋಪುರಗಳನ್ನು ಕಟ್ಟಿಸಿದ. ಅವುಗಳಿಗೆ ರಾಯಗೋಪುರಗಳೆಂದೇ ಹೆಸರು ಬಂತು.

ಕೃಷ್ಣದೇವರಾಯನ ನಂತರ ಸಿಂಹಾಸನಕ್ಕೆ ಕಿತ್ತಾಟವಾಯಿತು. ಕೆಲವರು ಸಿಂಹಾಸನಕ್ಕೆ ಬಂದರೂ ಮೊದಲ ವೈಭವ ಬರಲಿಲ್ಲ. ಕೃಷ್ಣದೇವರಾಯನ ತಮ್ಮನಾದ ಅಚ್ಯುತನು ಕೆಲವು ಕಾಲ ರಾಜನಾಗಿದ್ದ. ಅವನ ನಂತರ ಅವನ ತಮ್ಮ ರಂಗನ ಮಗ ಸದಾಶಿವರಾಯನು ರಾಜನಾದ.

ಸದಾಶಿವರಾಯನು ಹೆಸರಿಗೆ ರಾಜನಾಗಿದ್ದ. ಆಡಳಿತ ನಡೆಸುತ್ತಿದ್ದುದು ಕೃಷ್ಣದೇವರಾಯನ ಅಳಿಯನಾಗಿದ್ದ ರಾಮರಾಯ. ಈತನು ಹಿಂದಿನಿಂದ ಬಂದ ಅನೇಕ ಮಾಂಡಲೀಕರನ್ನು ತೆಗೆದು ಹಾಕಿದ. ಅವರ ಸ್ಥಾನದಲ್ಲಿ ತನ್ನವರನ್ನು ತುಂಬಿದ. ಸೇನೆಯಲ್ಲಿ ಮಹಮದೀಯರನ್ನು ಸೇರಿಸಿಕೊಂಡ. ಆದಿಲ್‌ಶಾಹಿ ರಾಜ್ಯಗಳು ಒಟ್ಟಾಗಿರದಂತೆ ಉಪಾಯ ಹೂಡಿದ. ಅವರ ಒಳಜಗಳಗಳ ಪ್ರಯೋಜನ ಪಡೆದು ತನ್ನ ರಾಜ್ಯವನ್ನು ವಿಸ್ತಾರ ಮಾಡಿದ. ಆದರೆ ಒಂದು ಸಾವಿರದ ಐನೂರ ಅರವತ್ತನಾಲ್ಕ ರಲ್ಲಿ ಅಂದರೆ ಸುಮಾರು ನಾನ್ನೂರಮೂವತ್ತು ವರ್ಷಗಳ ಹಿಂದೆ ಒಂದು ಪ್ರಮುಖ ಸಂಗತಿ ನಡೆಯಿತು. ಚದುರಿದ ಆದಿಲ್‌ಷಾಹಿ ಸುಲ್ತಾನರು ಒಂದಾದರು. ಅವರ ಸೈನ್ಯ ತಾಳಿಕೋಟೆಯ ಬಳಿ ರಾಮರಾಯನ ಸೈನ್ಯವನ್ನು ಎದುರಿಸಿತು. ರಾಮರಾಯ ಯುದ್ಧದಲ್ಲಿ ಸತ್ತ. ಅವನ ತಮ್ಮಂದಿರಾದ ತಿರುಮಲ ಹಾಗೂ ವೆಂಕಟಾದ್ರಿಗಳು ರಣರಂಗದಿಂದ ಓಡಿ ಬಂದರು. ಸಾಧ್ಯವಾದಷ್ಟು ಧನಕನಕಗಳನ್ನು ಚಂದ್ರಗಿರಿಗೆ ಸಾಗಿಸಿದರು. ಆದರೂ ಹಂಪೆಗೆ ಶತ್ರುಸೈನ್ಯ ನುಗ್ಗಿತು. ಅನೇಕ ದೇವಾಲಯಗಳನ್ನು ನಾಶ ಮಾಡಿದರು. ಅರಮನೆ, ಗುರುಮನೆ, ವಿಗ್ರಹಗಳು ನಾಶವಾದವು. ವಿಜಯನಗರದ ವೈಭವ ಮಣ್ಣುಗೂಡಿತು. ಹಂಪೆ ಹಾಳು ಹಂಪೆಯಾಯಿತು. ಅಲ್ಲಿಂದಾಚೆಗೆ ವಿಜಯನಗರದ ಅರಸರ ಕಡೆಯವರೆಂದು ಕೆಲವರು ರಾಜ್ಯವಾಳಿದರು. ಸಿಂಹಾಸನಕ್ಕಾಗಿ ಅವರಲ್ಲೇ ಕದನಗಳು ನಡೆಯುತ್ತಿದ್ದವು. ಇವರ ಕಾಲದಲ್ಲಿ ಪಾಳೆಯಗಾರರು ಹುಟ್ಟಿಕೊಂಡು ಸ್ವತಂತ್ರರಂತೆ ವರ್ತಿಸಿದರು. ಸಣ್ಣ ಅರಸರ ಆಳ್ವಿಕೆ ಪ್ರಾರಂಭವಾಯಿತು.

ಬಹುಮನಿ ರಾಜ್ಯ

ಈ ರಾಜ್ಯವು ಕರ್ನಾಟಕದ ಗುಲ್ಬರ್ಗದಲ್ಲಿ ಸುಮಾರು ಆರುನೂರಾ ಐವತ್ತು ವರ್ಷಗಳ ಹಿಂದೆ ಉದಿಸಿತು. ಇದರ ಸ್ಥಾಪಕ ಅಲ್ಲಾವುದ್ದೀನ್ ಹಸನ್ ಬಹಮನ್ ಷಹ.

ರಾಜ್ಯ ಸ್ಥಾಪಿಸಿದ ಹತ್ತು ವರ್ಷಗಳಲ್ಲಿ ಈತನ ರಾಜ್ಯ ಗೋವೆಯವರೆಗೆ ಹಬ್ಬಿತು. ದಕ್ಷಿಣದ ಗಡಿಯಾಗಿ ಕೃಷ್ಣಾ ನದಿಯಿತ್ತು. ಗುಲ್ಬರ್ಗದ ಬಲವಾದ ಕೋಟೆಯನ್ನು ಇವನು ಕಟ್ಟಿಸಿದ. ಮುಂದೆ ಈ ರಾಜ್ಯವನ್ನು ಆದಿಲ್‌ಶಾಹಿ, ಬರೀದ್‌ಶಾಹಿ, ಇಮಾಮ್‌ಶಾಹಿ, ನಿಜಾಮ್ ಶಾಹಿ ಮತ್ತು ಕುತುಬ್‌ಶಾಹಿ ಎಂದು ಐದು ಗುಂಪುಗಳವರು ಆಳಿದರು. ಇದರಲ್ಲಿ ಬೀದರಿನ ಬರೀದ್‌ಶಾಹಿ ಮತ್ತು ಬಿಜಾಪುರದ ಆದಿಲ್‌ಶಾಹಿಗಳು ಕರ್ನಾಟಕದಲ್ಲಿ ಆಳಿದವರು. ಬಿಜಾಪುರದ ಆದಿಲ್‌ಶಾಹಿಗಳ ರಾಜರಲ್ಲಿ ಮಹಮದ್ ಆದಿಲ್ ಶಹ ಒಬ್ಬನು. ಇವನ ಕಾಲದಲ್ಲಿ ಶಿವಾಜಿಯ ತಂದೆ ಶಹಜಿಯು ದಕ್ಷಿಣದ ದಿಗ್ವಿಜಯ ನಡೆಸಿದ. ಬೆಂಗಳೂರು, ಪಾಂಡಿಚೇರಿ, ಮುಂತಾದವು ಇವರ ವಶವಾದವು. ಮುಂದೆ ಔರಂಗಜೇಬ ಈ ಎಲ್ಲಾ ರಾಜ್ಯಗಳನ್ನು ತನ್ನ ವಶಮಾಡಿಕೊಂಡ. ಈ ಅರಸರು ಒಳ್ಳೆಯ ಕಲಾಪ್ರೇಮಿಗಳಾಗಿದ್ದರು. ಬೀದರಿನ ಮೂರು ಮಹಡಿಯ ಮದ್ರಸಾ, ಗುಲ್ಬರ್ಗದಲ್ಲಿನ ಜಾಮೀಯಾ ಮಸೀದಿ, ಬಿಜಾಪುರದ ಗೋಲಗುಮ್ಮಟ, ಬಿಜಾಪುರ, ಬೀದರ್ ಮುಂತಾದ ಕಡೆಯ ಕೋಟೆಗಳು ಇವರ ಕೊಡುಗೆಗಳು.

ಕೆಳದಿಯ ನಾಯಕ

ವಿಜಯನಗರ ರಾಜ್ಯದ ಪತನವಾದ ಮೇಲೆ ರಾಜ್ಯವು ಅನೇಕ ಸಣ್ಣಪುಟ್ಟ ರಾಜ್ಯಗಳಾಗಿ ಒಡೆದು ಹೋಯಿತು. ಇಂತಹ ರಾಜ್ಯಗಳನ್ನು ಆಳಿದ ಮನೆತನಗಳಲ್ಲಿ ಕೆಳದಿ ರಾಜ ಮನೆತನವೂ ಒಂದು. ಚೌಡಪ್ಪ ನಾಯಕ ಇದರ ಮೂಲ ಪುರುಷ. ಇವರು ಮೊದಲಿಗೆ ವಿಜಯನಗರದ ಸಾಮಂತರಾಗಿದ್ದರು. ರಾಮರಾಯ ಇವರಿಗೆ ಕೆಲವು ಪ್ರಾಂತ್ಯಗಳನ್ನು ನೀಡಿದ. ಈ ವಂಶದ ಒಂದನೇ ವೆಂಕಟಪ್ಪನಾಯಕನು ತುಳು ನಾಡಿನಲ್ಲಿದ್ದ ಸಣ್ಣಪುಟ್ಟ ರಾಜರನ್ನು ಗೆದ್ದು ತಮ್ಮ ರಾಜ್ಯ ವಿಸ್ತರಿಸಿಕೊಂಡ. ಇದರಿಂದ ಹೊರದೇಶದ ವ್ಯಾಪಾರ ಇವರ ಪಾಲಾಯಿತು. ಈ ನಾಡಿನ ಶ್ರೀಮಂತಿಕೆ ಬೆಳೆಯಿತು. ಇಟಲಿ ದೇಶದ ಪ್ರವಾಸಿ ಪೆಟ್ರೋ ಡೆಲ್ಲಾವಲ್ಲೆ ಎಂಬಾತ ಈ ರಾಜ್ಯಕ್ಕೆ ಬಂದಿದ್ದ. ಅವನು ವೆಂಕಟಪ್ಪನಾಯಕನನ್ನು ಸಮರ್ಥ ಯೋಧನೆಂದು ಕರೆದಿದ್ದಾನೆ. ಇವನ ಮೊಮ್ಮಗ ವೀರಭದ್ರನಾಯಕನು ರಾಜಧಾನಿಯನ್ನು ಬಿದನೂರಿಗೆ ಬದಲಾಯಿಸಿದ. ಮುಂದೆ ಪಟ್ಟಕ್ಕೆ ಬಂದ ಶಿವಪ್ಪನಾಯಕ ಈ ಅರಸರಲ್ಲಿ ಗಟ್ಟಿಗ. ವಿಜಯನಗರದ ಅರಸರಿಗೆ ಯುದ್ಧಗಳಲ್ಲಿ ಸಹಾಯ ಮಾಡಿದ. ಪೋರ್ಚುಗೀಸರನ್ನು ಹದ್ದುಬಸ್ತಿನಲ್ಲಿಟ್ಟ. ಇವನು ತನ್ನ ರಾಜ್ಯದಲ್ಲಿನ ಭೂಮಿಯನ್ನು ಮಣ್ಣಿನ ಗುಣಕ್ಕೆ ತಕ್ಕಂತೆ ವಿಂಗಡಿಸಿದ. ಅದಕ್ಕೆ ತಕ್ಕಂತೆ ಕಂದಾಯವನ್ನು ನಿಗದಿ ಮಾಡಿದ. ಇದನ್ನು ಶಿವಪ್ಪನಾಯಕನ ಶಿಸ್ತು ಎನ್ನುತ್ತಾರೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ಒಳ್ಳೆಯ ಆದಾಯ ಬಂತು. ಈ ವಂಶದಲ್ಲಿ ಮುಂದೆ ಬಂದ ಅರಸರಲ್ಲಿ

ಮುಖ್ಯರಾದವರು ಚೆನ್ನಮ್ಮಾಜಿ. ಶಿವಾಜಿಯ ಮಗ ರಾಜಾರಾಮನಿಗೆ ರಕ್ಷಣೆಯನ್ನು ಒದಗಿಸಿದವಳು. ಈಕೆಯ ದತ್ತುಪುತ್ರ ಬಸಪ್ಪನಾಯಕ. ಈತ ಕವಿಯೂ ಆಗಿದ್ದ. ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಹೈದರಾಲಿ ಈ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ.

ಕೆಳದಿ ಅರಸರು ಕಲಾ ಪೋಷಕರು. ಕೆಳದಿಯಲ್ಲಿ ರಾಮೇಶ್ವರ ಮತ್ತು ವೀರಭದ್ರ ದೇವಾಲಯಗಳನ್ನು ಕಟ್ಟಿಸಿದ್ದಾರೆ. ಇಕ್ಕೇರಿಯಲ್ಲಿ ಅಘೋರೇಶ್ವರ ದೇವಾಲಯವನ್ನು ಕಟ್ಟಿಸಿದ್ದಾರೆ. ಹಿಂದೂ ಮತ್ತು ಮುಸ್ಲಿಂ ಶೈಲಿಯ ಅಘೋರೇಶ್ವರ ದೇವಾಲಯ ಬಹು ಸುಂದರವಾಗಿದೆ. ಶೃಂಗೇರಿ ಹಾಗೂ ಉಡುಪಿಯ ಮಠಗಳಿಗೆ ಬೇಕಾದಷ್ಟು ದಾನವನ್ನು ನೀಡಿದ್ದಾರೆ.

ಮೈಸೂರು ಒಡೆಯರು

ಮೈಸೂರ ಅರಸರು ತಮ್ಮನ್ನು ದ್ವಾರಕೆಯ ಕಡೆಯಿಂದ ಬಂದ ಯಾದವರೆಂದು ಹೇಳಿಕೊಂಡಿದ್ದಾರೆ. ಇವರು ಪ್ರಾರಂಭದಲ್ಲಿ ಹದಿನಾಡಿನ ಅರಸರಾಗಿದ್ದರು. ರಾಜಒಡೆಯರು ಕಾರುಗಳ್ಳಿಯ ವೀರರಾಜಯ್ಯನನ್ನು ಸೋಲಿಸಿದರು. ಮುಂದೆ ಶ್ರೀರಂಗಪಟ್ಟಣದ ಒಡೆತನವನ್ನು



ಮೈಸೂರು ಅರಮನೆ

ತಾವೇ ಪಡೆದರು. ರಾಜಧಾನಿಯನ್ನು ಶ್ರೀರಂಗಪಟ್ಟಣಕ್ಕೆ ಬದಲಾಯಿಸಿದ ಮೇಲೂ ಕೋಟೆಯ ಚೆಲುವನಾರಾಯಣನಿಗೆ 'ರಾಜಮುಡಿ' ಎಂಬ ಕಿರೀಟವನ್ನು ಮಾಡಿಸಿದರು. ಈ ವಂಶದಲ್ಲಿ ಮುಂದೆ ಬಂದ ಅರಸರಲ್ಲಿ ಕಂಠೀರವನರಸರಾಜ ಒಡೆಯ ಮುಖ್ಯರಾದವರು. ಇವರು ಸುತ್ತಮುತ್ತಲ ಸಣ್ಣ ರಾಜ್ಯಗಳನ್ನು ಗೆದ್ದರು. ಕಂಠೀರಾಯ ನಾಣ್ಯಗಳನ್ನು ಚಲಾವಣೆಗೆ ತಂದರು. ಮಾಗಡಿ, ಸತ್ಯಮಂಗಲ ಮುಂತಾದ ಪಾಳೆಯಗಾರರಿಂದ ಕಪ್ಪಕಾಣಿಕೆ ವಸೂಲಿ ಮಾಡಿದರು. ಇವರ ಆಸ್ಥಾನದಲ್ಲಿ ಗೋವಿಂದ ವೈದ್ಯನೆಂಬ ಕವಿ ಇದ್ದ. ಈತನು 'ಕಂಠೀರವ ನರಸರಾಜ ವಿಜಯ'ವೆಂಬ ಗ್ರಂಥವನ್ನು ಬರೆದ. ದೇವರಾಜ ಒಡೆಯರ ಕಾಲದಲ್ಲಿ ಸಕ್ಕರೆಪಟ್ಟಣ, ಹಾಸನ, ಈರೋಡು, ಧರ್ಮಪುರಿ ಇವರ ವಶವಾಯಿತು. ಚಾಮುಂಡಿಬೆಟ್ಟಕ್ಕೆ ಮೆಟ್ಟಿಲು ಮಾಡಿಸಿದರು. ಇವರ ನಂತರ ಚಿಕ್ಕದೇವರಾಜ ಒಡೆಯರು ಪಟ್ಟಕ್ಕೆ ಬಂದರು. ಆಡಳಿತ ಪದ್ಧತಿಯನ್ನು ಈತ ಸುಧಾರಿಸಿದರು. ಬೆಂಗಳೂರನ್ನು ಮೊಗಲರಿಂದ ಗುತ್ತಿಗೆಗೆ ಪಡೆದರು. ಮರಾಠರ ಸೈನ್ಯವನ್ನು ಸೋಲಿಸಿದರು. ಇವರಿಗೆ 'ಅಪ್ರತಿಮ ವೀರ' ಎಂಬ ಬಿರುದಿತ್ತು. ಇವರು ಸಾಹಿತ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಹೊನ್ನಮ್ಮ, ಶೃಂಗಾರಮ್ಮ, ತಿರುಮಲಾರ್ಯ ಮುಂತಾದ ಕವಿಗಳು ಇವರ ಆಸ್ಥಾನದಲ್ಲಿದರು. ಇವರ ನಂತರ ಬಂದ ರಾಜರು ಅಶಕ್ತರಾಗಿದ್ದರು. ಇವರ ಪರವಾಗಿ ದಳವಾಯಿಗಳು ರಾಜ್ಯವಾಳುತ್ತಿದ್ದರು.

ಹೈದರ್ ಅಲಿ

ಹೈದರ್ ಅಲಿ ಈಗ್ಗೆ ಸುಮಾರು ಇನ್ನೂರ ಎಂಬತ್ತು ವರ್ಷಗಳ ಹಿಂದೆ ಬೂದಿಕೋಟೆ ಎಂಬ ಗ್ರಾಮದಲ್ಲಿ ಜನಿಸಿದ. ಹೈದರನು ದಳವಾಯಿ ನಂಜರಾಜನ ನಂಬಿಗಸ್ತ ಸೈನಿಕನಾಗಿದ್ದ. ಶೌರ್ಯದಿಂದ, ಯುಕ್ತಿಯಿಂದ ಹಂತ ಹಂತವಾಗಿ ಮೇಲೇರಿದ. ಮುಂದೆ ಹೈದರ್ ಅಲಿ ಕೂಡ ದಳವಾಯಿ ಹುದ್ದೆಗೆ ಏರಿದ. ಸಿರಾ, ಹೊಸಕೋಟೆ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಪೆನಗೊಂಡೆ, ಚಿತ್ರದುರ್ಗ, ಹರಪನಹಳ್ಳಿ ಮುಂತಾದ ಪ್ರಾಂತ್ಯಗಳನ್ನು ಗೆದ್ದುಕೊಂಡ. ಮುಂದೆ ಬಿದನೂರನ್ನು ಗೆದ್ದುಕೊಂಡ. ಉತ್ತರದಲ್ಲಿ ಸೋಂದೆಯನ್ನು ತನ್ನ ವಶಕ್ಕೆ ಪಡೆದ. ಹಾಗೆಯೇ ಮಲಬಾರಿನ ತೀರ ಪ್ರದೇಶವನ್ನು ತನ್ನ ವಶಕ್ಕೆ ಪಡೆದ. ಹೈದರನ ಈ ಬೆಳವಣಿಗೆಯನ್ನು ಬ್ರಿಟೀಷರು ಸಹಿಸದಾದರು. ಇವನು ಮರಾಠ ಮತ್ತು ನಿಜಾಮನೊಡನೆ ಸ್ನೇಹ ಬೆಳೆಸಿದನು. ಬ್ರಿಟೀಷರ ಮೇಲೆ ಈತ ಅನೇಕ ಬಾರಿ ಯುದ್ಧ ಹೂಡಿದ. ಈ ಯುದ್ಧಗಳಲ್ಲಿ ಒಮ್ಮೆ ಗೆಲವು ಒಮ್ಮೆ ಸೋಲು ಇರುತ್ತಿತ್ತು. ಆರ್ಕಾಟ್‌ನ ಯುದ್ಧ ನಡೆಯುತ್ತಿದ್ದಾಗ ಹೈದರ್

ಸೋತ. ಕೊನೆಗೆ ಬೆನ್ನುಫಣಿ ರೋಗದಿಂದ ಆತ ಕೊನೆಯುಸಿರೆಳೆದ. ಮುಂದೆ ಇವನ ಮಗ ಟಿಪ್ಪೂ ತಂದೆಯ ಯುದ್ಧಗಳನ್ನು ಮುಂದುವರಿಸಿದ.

ಟಿಪ್ಪೂ ಸುಲ್ತಾನ್

ಟಿಪ್ಪೂ ಸುಲ್ತಾನನು ಇನ್ನೂರ ಐವತ್ತು ವರ್ಷಗಳ ಹಿಂದೆ ದೇವನಹಳ್ಳಿಯಲ್ಲಿ ಜನಿಸಿದ. ಚಿಕ್ಕಂದಿನಿಂದಲೇ ಈತ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದ. ಮರಾಠರ ಮೇಲೆ ಅನೇಕ ಯುದ್ಧಗಳನ್ನು ಮಾಡಿದ. ಧಾರವಾಡ, ಸವಣೂರಿನವರೆಗೆ ಇವನ ರಾಜ್ಯ ಹಬ್ಬಿತ್ತು. ಟಿಪ್ಪೂ ಬ್ರಿಟೀಷರನ್ನು ಎದುರಿಸಲು ಫ್ರೆಂಚರ ಸಹಾಯ ಕೇಳಿದ್ದ. ಬಹುಶಃ ಸಕಾಲದಲ್ಲಿ ನೆರವು ಸಿಕ್ಕಿದ್ದಲ್ಲಿ ಕರ್ನಾಟಕದ ಇತಿಹಾಸವೇ ಬದಲಾಗುತ್ತಿತ್ತು. ಬ್ರಿಟೀಷರ ಮೇಲೆ ನಡೆದ ಯುದ್ಧವೊಂದರಲ್ಲಿ ಟಿಪ್ಪೂ ಸೋತು ತನ್ನ ಮಕ್ಕಳನ್ನು ಒತ್ತೆ ಇಟ್ಟ ಒಂದು ಸಾವಿರದ ಏಳುನೂರಾ ತೊಂಬತ್ತೊಂಬತ್ತರಲ್ಲಿ ಶ್ರೀರಂಗಪಟ್ಟಣದಲ್ಲಿ ನಡೆದ ಯುದ್ಧದಲ್ಲಿ ಟಿಪ್ಪೂ ಸತ್ತ. ಸತ್ತಾಗ ಇವನಿಗೆ ನಲವತ್ತೊಂಬತ್ತು ವರ್ಷ ವಯಸ್ಸಾಗಿತ್ತು. ಹೈದರ್ ಮತ್ತು ಟಿಪ್ಪೂ ಸುಲ್ತಾನರಿಗೆ ಮಂತ್ರಿಯಾಗಿದ್ದ ಪೂರ್ಣಯ್ಯ ಚಾಣಾಕ್ಷ ರಾಜಕಾರಣಿ. ಟಿಪ್ಪೂ ಸತ್ತ ಮೇಲೆ ಸುಮಾರು ಹನ್ನೆರಡು ವರ್ಷಗಳ ಕಾಲ ಈತ ದಿವಾನನಾಗಿದ್ದ. ಟಿಪ್ಪೂ ಸತ್ತ ಮೇಲೆ ಕರ್ನಾಟಕ ರಾಜ್ಯವು ಬ್ರಿಟೀಷ್, ಮರಾಠ ಮತ್ತು ಹೈದ್ರಾಬಾದ್ ನಿಜಾಮರಲ್ಲಿ ಹಂಚಿ ಹೋಯಿತು. ಉಳಿದ ಸಂಸ್ಥಾನವು ಮುಮ್ಮಡಿ ಕೃಷ್ಣರಾಜ ಒಡೆಯರ ಪಾಲಿಗೆ ಬಂದಿತು ಆದರೆ ಮೈಸೂರು ಸಂಸ್ಥಾನದಲ್ಲಿ ಹೆಸರಿಗೆ ರಾಜವಂಶೀಯರಿದ್ದರೂ ಸೈನ್ಯ ಮುಂತಾದವು ಬ್ರಿಟೀಷರ ವಶದಲ್ಲಿರುತ್ತಿದ್ದವು.

ಮುಮ್ಮಡಿ ಕೃಷ್ಣರಾಜ ಒಡೆಯರು

ಮುಮ್ಮಡಿ ಕೃಷ್ಣರಾಜ ಒಡೆಯರು ರಾಜರಾದಾಗ ಅವರಿಗೆ ಐದು ವರ್ಷ ವಯಸ್ಸು. ಇವರು ಕೆಲವು ವರ್ಷಗಳು ಆಳ್ವಿಕೆ ನಡೆಸಿದರು. ಆದರೆ ಬ್ರಿಟೀಷರು ದುಂದುವೆಚ್ಚದ ಆಪಾದನೆ ಹೊರಿಸಿ ಆಡಳಿತವನ್ನು ತಾವೇ ವಹಿಸಿಕೊಂಡರು. ಈ ಕೊರಗಿನಲ್ಲಿಯೇ ಮುಮ್ಮಡಿಕೃಷ್ಣರಾಜ ಒಡೆಯರು ತೀರಿಕೊಂಡರು. ಸುಮಾರು ಐವತ್ತು ವರ್ಷಗಳ ನಂತರ ಬ್ರಿಟೀಷರು ಚಾಮರಾಜ ಒಡೆಯರಿಗೆ ಅಧಿಕಾರ ನೀಡಿದರು. ಮುಮ್ಮಡಿಯವರ ಕಾಲ ಕನ್ನಡ ಸಾಹಿತ್ಯದಲ್ಲಿ ಬಹುಮುಖ್ಯ ಕಾಲ. ಹಳೆತು ಹೊಸದರ ಮಿಶ್ರಣ. ಇವರು ಸ್ವತಃ ತಾವೇ ಕವಿಗಳಾಗಿದ್ದರು. ಅನೇಕ

ಗ್ರಂಥಗಳನ್ನು ಇವರು ಬರೆದಿದ್ದಾರೆ. ಸಂಗೀತಗಾರರಿಗೆ, ಕವಿಗಳಿಗೆ ಇವರು ಆಶ್ರಯ ನೀಡಿದ್ದರು. ನಂಜನಗೂಡು, ಚಾಮುಂಡಿಬೆಟ್ಟ, ಮೇಲುಕೋಟೆಯ ದೇವಾಲಯಗಳಿಗೆ ದಾನ ನೀಡಿರುತ್ತಾರೆ. ಮುಮ್ಮಡಿ ಕೃಷ್ಣರಾಜ ಒಡೆಯರು ಸತ್ತಾಗ ಅವರ ದತ್ತುಪುತ್ರ ಚಾಮರಾಜರಿಗೆ ಚಿಕ್ಕ ವಯಸ್ಸು. ಹೀಗಾಗಿ ಅವರಿಗೆ ಹದಿನೆಂಟು ವರ್ಷವಾಗುವವರೆಗೆ ಬ್ರಿಟೀಷ್ ಅಧಿಕಾರಿಗಳೇ ಪೋಷಕರಾಗಿ ಆಳಿದರು.

ಚಾಮರಾಜ ಒಡೆಯರು ಪಟ್ಟಕ್ಕೆ ಬಂದ ಮೇಲೆ ಪ್ರಜಾಪ್ರತಿನಿಧಿ ಸಭೆ ಆರಂಭವಾಯಿತು. ಇವರ ಕಾಲದಲ್ಲಿ ಶೇಷಾದ್ರಿ ಅಯ್ಯರ್‌ರವರು ದಿವಾನರಾದರು. ಬೆಂಗಳೂರು-ತಿಪಟೂರು ರೈಲ್ವೆ ಮಾರ್ಗದ ಕೆಲಸ ಇವರ ಕಾಲದಲ್ಲಿ ಆರಂಭವಾಯಿತು. ಸಾವಿರದ ಎಂಟುನೂರಾ ತೊಂಬತ್ನಾಲ್ಕರಲ್ಲಿ ಚಾಮರಾಜ ಒಡೆಯರು ತೀರಿಕೊಂಡರು. ಆಗ ನಾಲ್ವಡಿ ಕೃಷ್ಣರಾಜ ಒಡೆಯರು ಇನ್ನೂ ಚಿಕ್ಕವರಾಗಿದ್ದರು. ಅವರ ತಾಯಿ ಮಗನ ಪರವಾಗಿ ರಾಜ್ಯವಾಳಿದರು. ಒಂದು ಸಾವಿರದ ಒಂಬೈನೂರಾ ಎರಡರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಪಟ್ಟಕ್ಕೆ ಬಂದರು. ಇವರ ಆಳ್ವಿಕೆಯಲ್ಲಿ ಮೈಸೂರು ಹೆಚ್ಚಿನ ಪ್ರಗತಿ ಸಾಧಿಸಿತು. ಸಾಬೂನು ಕಾರ್ಖಾನೆ, ಭದ್ರಾವತಿ ಕಬ್ಬಿಣದ ಕಾರ್ಖಾನೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಬ್ಯಾಂಕು, ಕೃಷ್ಣರಾಜಸಾಗರ, ಶಿಂಷಾ ವಿದ್ಯುತ್ ಕೇಂದ್ರ, ವಿಮಾನ ಕಾರ್ಖಾನೆ, ಸಕ್ಕರೆ ಕಾರ್ಖಾನೆ ಹೀಗೆ ಅನೇಕ ಕಾರ್ಖಾನೆಗಳ ಹಾಗೂ ಸಂಸ್ಥೆಗಳ ಸ್ಥಾಪನೆಯಾಯಿತು. ಹೀಗಾಗಿ ಇವರ ಕಾಲದಲ್ಲಿ ಮೈಸೂರು ರಾಜ್ಯಕ್ಕೆ, ಮಾದರಿ ಮೈಸೂರು ಎಂಬ ಹೆಸರು ಬಂತು. ಇವರ ನಂತರ ಒಂದು ಸಾವಿರದ ಒಂಬೈನೂರಾ ನಲವತ್ತರಲ್ಲಿ ಜಯಚಾಮರಾಜ ಒಡೆಯರು ಪಟ್ಟಕ್ಕೆ ಬಂದರು. ಒಂದು ಸಾವಿರದ ಒಂಬೈನೂರಾ ನವವತ್ತೇಳರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂತು. ಆಗ ಮೈಸೂರು ಸಂಸ್ಥಾನವು ಭಾರತದ ಒಕ್ಕೂಟದಲ್ಲಿ ವಿಲೀನವಾಯಿತು.

ಕೊಡಗು

ಬಿದನೂರಿನ ರಾಜಕುಮಾರನಿಂದ ಈ ವಂಶ ಆರಂಭವಾಯಿತು. ಈತನು ಕೊಡಗು ಹಾಗೂ ಅದರ ಸುತ್ತಮುತ್ತಲಿನ ಪಾಳೆಯಗಾರರನ್ನು ಒಗ್ಗೂಡಿಸಿ ಸಣ್ಣ ರಾಜ್ಯ ಸ್ಥಾಪಿಸಿದನು. ಈ ವಂಶದಲ್ಲಿ ಮುದ್ದುರಾಜ, ವೀರಾಜ ಮತ್ತು ಲಿಂಗರಾಜರು ಮುಖ್ಯರಾದವರು. ಇವರ ಕಾಲದಲ್ಲಿ, ಕೊಡಗಿನ ರಾಜರು ಹೈದರಾಲಿ ಟಿಪ್ಪೂ ವಿರುದ್ಧ ಹೋರಾಡಲು ಬ್ರಿಟೀಷರಿಗೆ

ಸಹಾಯ ಮಾಡಿದರು. ಒಮ್ಮೆ ಭಾಗಮಂಡಲವನ್ನು ಟಿಪ್ಪೂ ಗೆದ್ದ. ಅಲ್ಲಿನ ಜನರನ್ನು ನಂಬಿಸಿ ದೇವಾಲಯದ ಬಳಿ ಬರುವಂತೆ ಮಾಡಿದ. ಅನಂತರ ಅವರನ್ನೆಲ್ಲಾ ಸೆರೆ ಹಿಡಿದು ಶ್ರೀರಂಗಪಟ್ಟಣಕ್ಕೆ ಕರೆ ತಂದ. ಅಲ್ಲಿ ಅವರೆಲ್ಲರನ್ನೂ ಇಸ್ಲಾಮಿಗೆ ಮತಾಂತರಿಸಿದ. ಕೊನೆಯ ಅರಸು ಚಿಕವೀರರಾಜೇಂದ್ರನ ಕಾಲದಲ್ಲಿ ಬೇಟಿಂಕನು ಕೊಡಗನ್ನು ಕಿತ್ತುಕೊಂಡ. ಚಿಕ್ಕವೀರರಾಜನನ್ನು ಕಾಶಿಗೆ ಸ್ಥಳಾಂತರಿಸಿದ. ಮುಂದೆ ಕೊಡಗು ಬ್ರಿಟೀಷರ ಅಧೀನಕ್ಕೆ ಬಂತು.

ಸ್ವಾತಂತ್ರ್ಯ ಚಳುವಳಿ

ತಾಳಿಕೋಟೆ ಯುದ್ಧದಲ್ಲಿ ವಿಜಯನಗರದ ಅರಸರು ಸೋತರು. ಅನಂತರ ವಿಜಯನಗರ ರಾಜ್ಯದಲ್ಲಿ ಅರಾಜಕತೆ ಮೂಡಿತು. ಅನೇಕ ಪಾಳೆಯಗಾರರು ಬಂದರು. ಇವರಲ್ಲಿ ಒಮ್ಮತವಿರದೆ ಯಾವಾಗಲೂ ಕಲಹವಾಡುತ್ತಿದ್ದರು. ಇವರೆಲ್ಲರನ್ನೂ ಹೈದರಾಲಿ ಮತ್ತು ಟಿಪ್ಪೂ ಸದೆಬಡಿದು, ಅವರ ರಾಜ್ಯಗಳನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ಮುಂದೆ ಟಿಪ್ಪೂ ಸಾವಿನನಂತರ ಬ್ರಿಟೀಷರು ಭಾರತದಲ್ಲಿ ಭದ್ರವಾಗಿ ನೆಲೆಯೂರಿದರು. ಇವರು ಸೈನ್ಯ ಪದ್ಧತಿಯ ನೆರವಿನಿಂದ ಒಂದೊಂದೇ ರಾಜ್ಯವನ್ನು ಕಬಳಿಸಿ ಇಡೀ ಭಾರತದಲ್ಲಿ ತಮ್ಮ ಆಡಳಿತವನ್ನು ಭದ್ರ ಮಾಡಿಕೊಂಡರು. ಕಿತ್ತೂರಿನ ಚೆನ್ನಮ್ಮ ಮೊದಲ ಬಾರಿಗೆ ಕರ್ನಾಟಕದಲ್ಲಿ ಬ್ರಿಟೀಷರನ್ನು ಎದುರಿಸಿದವಳು. 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ಘೋಷಣೆಯಿಂದ ಆದ ತೊಂದರೆಯೇ ಇದಕ್ಕೆ ಕಾರಣ. ಆದರೆ ಈ ದಂಗೆಯನ್ನು ಸುಲಭವಾಗಿ ಅಡಗಿಸಲಾಯಿತು. ಮುಂದೆ ಈಕೆಯ ನೆಚ್ಚಿನ ಭಂಟ ಸಂಗೊಳ್ಳಿಯ ರಾಯಣ್ಣ ಕೆಲಕಾಲ ಬ್ರಿಟೀಷರನ್ನು ಎದುರಿಸಿದನು. ಅವನನ್ನು ಬ್ರಿಟಿಷರು ಹಿಡಿದು ಗಲ್ಲಿಗೆ ಹಾಕಿದರು. ಹಾಗೆಯೇ ಕೊಡಗು, ಹಲಗಲಿ, ನರಗುಂದ ಮುಂತಾದ ಕಡೆ ನಡೆದ ದಂಗೆಗಳನ್ನೂ ಅಡಗಿಸಲಾಯಿತು.

ಮುಂದೆ ಸ್ವಾತಂತ್ರ್ಯ ಚಳುವಳಿಯ ಕಾವು ಕರ್ನಾಟಕಕ್ಕೂ ತಟ್ಟಿತು. ಉತ್ತರ ಕರ್ನಾಟಕದಲ್ಲಿ ಬಾಲಗಂಗಾಧರ ತಿಲಕರು ಅನೇಕ ಕಡೆ ಚಳುವಳಿಗೆ ಸಂಬಂಧಿಸಿದಂತೆ ಭಾಷಣ ಮಾಡಿದರು. ಸಾವಿರದ ಒಂಬೈನೂರಾ ಹದಿನೈದರಿಂದ ಸಾವಿರದ ಒಂಬೈನೂರಾ ಇಪ್ಪತ್ತರ ಅವಧಿಯಲ್ಲಿ ಗಾಂಧೀಜಿಯವರು ಬೆಂಗಳೂರು, ಬೆಳಗಾವಿ, ಬಿಜಾಪುರ, ಧಾರವಾಡ, ಗದಗು ಮುಂತಾದ ಕಡೆಗಳಿಗೆ ಭೇಟಿ ನೀಡಿ, ಜನರಲ್ಲಿ ಹುರುಪು ತಂಬಿದರು. ಗಂಗಾಧರರಾವ್ ದೇಶಪಾಂಡೆ, ನಾ.ಸು. ಹರ್ಡೀಕರರು, ತಗಡೂರು ರಾಮಚಂದ್ರರಾಯರು, ಎಂ.ಎನ್. ಜೋಯಿಸ್ ಮುಂತಾದವರ ನೇತೃತ್ವದಲ್ಲಿ ನಡೆದ ಚಳವಳಿ ಅಹಿಂಸಾತ್ಮಕವಾಗಿ ನಡೆಯಿತು. ಸಾವಿರದ

ಒಂಬೈನೂರಾ ನಲವತ್ತೆರಡರಲ್ಲಿ ನಡೆದ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಕರ್ನಾಟಕದಲ್ಲಿ ಸ್ವಲ್ಪ ಮಟ್ಟಿನ ಹಿಂಸಾಚಾರ ನಡೆಯಿತು. ಅನೇಕ ಸಾವು ನೋವುಗಳಾದವು. ಮುಂದೆ ಸಾವಿರದ ಒಂಬೈನೂರಾ ನಲವತ್ತೇಳು ಆಗಸ್ಟ್ ಹದಿನೈದರಲ್ಲಿ ಭಾರತದ ಇತರ ಪ್ರಾಂತ್ಯಗಳಂತೆ ಕರ್ನಾಟಕವೂ ಸ್ವತಂತ್ರ್ಯಗೊಂಡಿತು.

ಏಕೀಕರಣ

ಸ್ವಾತಂತ್ರ್ಯ ಚಳುವಳಿಯ ಅಂಗವಾಗಿ ಮೊದಲು ಏಕೀಕರಣದ ಚಳುವಳಿಯೂ ಪ್ರಾರಂಭವಾಯಿತು. ಸಾವಿರದ ಎಂಟನೂರಾ ಐವತ್ತಾರರಲ್ಲಿ ಡೆಪ್ಯುಟೀ ಚೆನ್ನಬಸಪ್ಪನವರು ಈ ಬಗ್ಗೆ ಯೋಚಿಸಿದ್ದರು. ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು ಮುಂತಾದ ಸಂಸ್ಥೆಗಳು ಏಕೀಕರಣಕ್ಕೆ ಒತ್ತು ನೀಡಿದವು. ಸಾಹಿತ್ಯ ಸಮ್ಮೇಳನಗಳಲ್ಲಿ, ಕಾಂಗ್ರೆಸ್ ಅಧಿವೇಶನಗಳಲ್ಲಿ ಏಕೀಕರಣದ ಬಗ್ಗೆ ಗೊತ್ತುವಳಿ ಮಂಡಿಸುತ್ತಿದ್ದರು. ಕರ್ನಾಟಕದಂತೆ ಭಾರತದ ಇತರೆ ರಾಜ್ಯಗಳೂ ಏಕೀಕರಣಕ್ಕಾಗಿ ಚಳುವಳಿ ಹೂಡಿದವು. ಮುಂದೆ ಸಾವಿರದ ಒಂಬೈನೂರಾ ಐವತ್ತಾರರಲ್ಲಿ ಈಗಿನ ಕರ್ನಾಟಕ ಉದಿಸಿತು. ಆಗ ಅದಕ್ಕೆ ಮೈಸೂರು ಸಂಸ್ಥಾನವೆಂಬ ಹೆಸರೇ ಇತ್ತು. ಸಾವಿರದ ಒಂಬೈನೂರಾ ಎಪ್ಪತ್ತೆರಡರಲ್ಲಿ ಇದು ಕರ್ನಾಟಕವೆಂಬ ಹೆಸರನ್ನು ಪಡೆಯಿತು.

***

ದವರೆಗೆ ಉತ್ತಮ
ಠ್ಯಪುಸ್ತಕ ರಚನಾ
ಠ್ಯಪುಸ್ತಕ ರಚನೆ
ನವಸಾಕ್ಷರರಿಗಾಗಿ
ವಹಿಸಿಕೊಟ್ಟರು.
ಖ್ಯಾತ ಲೇಖಕರನ್ನು,
ಲ್ಲರ ಅಭಿಪ್ರಾಯ,
ಮುದ್ರಣ ವಿನ್ಯಾಸ,
ೇಕ ಸಲ ಚರ್ಚಿಸಿ

ಪ್ರಕಟವಾಗಿರುವ
ಭಾಷಾತಜ್ಞರಿಂದ
ಕೊಂಡು ಅವರಿಗೆ
ತ ಆಯ್ದ ಜಿಲ್ಲೆ,
ುವವರಿಂದ ಅದರ
ವಿಶ್ವವಿದ್ಯಾಲಯದ
ಾಯಕರು ನೀಡಿದ್ದ
ಣವಾಗಿ ವಿಷಯದ
ಲೇಖಕರು ನಮ್ಮ
ರೂಪ ಕೊಟ್ಟರು.
ತ ಹಸ್ತಪ್ರತಿಗಳನ್ನು
, ಪ್ರತಿಕ್ರಿಯೆಗಳನ್ನು

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು